## ೧೬.೦೫.೨೦೧೨ರಂದು ನಡೆದ ಪ್ರಶಾಸನ ಸಮಿತಿ ೪ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ೪ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೇ ೧೬, ೨೦೧೨ರ ಬುಧವಾರ ಮಧ್ಯಾಹ್ನ ೦೨.೩೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಎಚ್.ಎಂ. ಸಿದ್ದನಗೌಡರ್,** ಉಪ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೩. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೪. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೫. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೬. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿಗಳು,** ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಮೂರನೆಯ ಪ್ರಶಾಸನ ಸಮಿತಿ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 29.02.2011ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಮೂರನೇ (ವಿಶೇಷ) ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

*ವಿಷಯ ಸಂಖ್ಯೆ 2ರ* **ವೃಂದ ಮತ್ತು ನೇಮಕಾತಿ ಪರಿನಿಯಮ**ವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ವಿಷಯ ಸಂಖ್ಯೆ 3ರ **ಪಿಎಚ್.ಡಿ. ನಿಯಮಾವಳಿ**ಯನ್ನು ಕನ್ನಡದಲ್ಲಿ ಸಿದ್ಧಪಡಿಸಲಾಗುತ್ತಿದೆ. *ವಿಷಯ ಸಂಖ್ಯೆ 4ರ* ಅನುಮೋದಿತ **ಎಂ.ಫಿಲ್. ನಿಯಮಾವಳಿ** ಅನುಸಾರ 2012–13ನೇ ಸಾಲಿನಲ್ಲಿ ಎಂ.ಫಿಲ್. ಪದವಿ ಆರಂಭಿಸುವ ಕುರಿತು ಅಧಿಸೂಚನೆಯನ್ನು ಹೊರಡಿಸಲಾಗಿದೆ. *ವಿಷಯ ಸಂಖ್ಯೆ 5ರ* **ಡಿ.ಲಿಟ್. ಪರಿನಿಯಮ**ವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. *ವಿಷಯ ಸಂಖ್ಯೆ 6ರ* **ಶೋಧಸಂಸ್ಥೆಗಳ ಮಾನ್ಯತಾ ಪರಿನಿಯಮ**ವನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸಿಕೊಡಲಾಗಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯ** *ಸಂಖ್ಯೆ 3ರ* **ಘಟಕ ಕಾಲೇಜುಗಳ ಪರಿನಿಯಮ**ವನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸಲಾಗಿದೆ. **ವಿಷಯ 4ಕ್ಕೆ** ಸಂಬಂಧಿಸಿದಂತೆ ಘಟಕ ಕಾಲೇಜುಗಳಾದ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಸ್ಥಿರಾಸ್ತಿಯ ಖಾತೆಯನ್ನು ವಿಶ್ವವಿದ್ಯಾಲಯದ ಹೆಸರಿಗೆ ಬದಲಾಯಿಸಿಕೊಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅರ್ಜಿಯನ್ನು ಸಲ್ಲಿಸಲಾಗಿದೆ. ಅದೇ ರೀತಿ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಸ್ಥಿರಾಸ್ತಿಯ

ಖಾತೆಯನ್ನು ವಿಶ್ವವಿದ್ಯಾಲಯದ ಹೆಸರಿಗೆ ಬದಲಾಯಿಸಿಕೊಡಲು ಮೈಸೂರು ಮಹಾನಗರ ಪಾಲಿಕೆಗೆ ಅರ್ಜಿಯನ್ನು ಸಲ್ಲಿಸಿದ್ದು, ಈ ಕಾರ್ಯವು ಪ್ರಗತಿಯಲ್ಲಿದೆ. **ವಿಷಯ 5ಕ್ಕೆ** ಸಂಬಂಧಿಸಿದಂತೆ ಸಭೆಯ ಅನುಮೋದನೆಯಂತೆ ಪದೋನ್ನತಿಯ ಆದೇಶವನ್ನು ನೀಡಿ ಕ್ರಮವಹಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನ ವರದಿಯನ್ನು ಪರಿಶೀಲಿಸಿ ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 2: ದಿನಾಂಕ: 26.03.2012ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗ ಸಲಹಾ ಸಮಿತಿ ಮೊದಲನೆಯ ಸಭೆಯು ದಿನಾಂಕ: ಮಾರ್ಚ್ 26, 2012ರ ಸೋಮವಾರ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಸಲ್ಲಿಸಿದೆ.

ನಿರ್ಣಯ: **ಸಭೆಯು ಪ್ರಸಾರಾಂಗ ಸಲಹಾ ಸಮಿತಿಯ ಸಭಾ ನಡಾವಳಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಎಲ್ಲ ವಿಷಯಗಳಿಗೂ ತನ್ನ ಅನುಮೋದನೆಯನ್ನು ನೀಡಿತು. 'ಅಭಿಲಷಿತಾರ್ಥ ಚಿಂತಾಮಣಿ' ವಿಶ್ವಕೋಶವನ್ನು ಕನ್ನಡದ ಜೊತೆಗೆ ಇಂಗ್ಲಿಷ್‌ನಲ್ಲೂ ಅನುವಾದಿಸಿ ಪ್ರಕಟಿಸುವುದು ಉಚಿತವೆಂದು ಸಭೆಯ ಸದಸ್ಯರಾದ ಡಾ. ಎಸ್.ಆರ್. ಲೀಲಾ ಅವರು ಅಭಿಪ್ರಾಯಿಸಿದರು.**

**ವಿಷಯ 3: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ 2012ರ ಪರಿಶೀಲನೆ ಮತ್ತು ಅನುಮೋದನೆ ಬಗೆಗೆ.**

ಟಿಪ್ಪಣಿ: ಮಾನ್ಯ ಕುಲಪತಿಗಳ ಆದೇಶದಂತೆ ತಜ್ಞರ ಸಮಿತಿಯೊಂದು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು ರಚಿಸಿ ಕರಡನ್ನು ಸಿದ್ಧಪಡಿಸಿದೆ. ಆ ಕರಡನ್ನು ಪ್ರಶಾಸನ ಸಮಿತಿಯ ಹಾಗೂ ಪ್ರಶಿಕ್ಷಣ ಪರಿಷತ್ತಿನ ಸದಸ್ಯರನ್ನೊಳಗೊಂಡ ಉಪಸಮಿತಿಯು ಈಗಾಗಲೇ ಪರಿಶೀಲಿಸಿ ನೀಡಿದೆ. ಈ ಪರಿನಿಯಮವನ್ನು ಅನುಮೋದನೆಗಾಗಿ ಸಭೆಯ ಮುಂದೆ ಸಲ್ಲಿಸಿದೆ.

ನಿರ್ಣಯ: **ಸಭೆಯು ಪರಿನಿಯಮದ ವಿವರಗಳನ್ನು ಪರಿಶೀಲಿಸಿತು. ಈ ಸಂಬಂಧವಾಗಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಸಭೆಯ ಮುಂದೆ ಪರಿನಿಯಮದ ಮುಖ್ಯಾಂಶಗಳನ್ನು ವಿವರಿಸಿದರು. ಅನಂತರ ಸಭೆಯು ಮುಂದಿನ ಸೂಕ್ತ ಕ್ರಮಕ್ಕಾಗಿ ಸರ್ಕಾರದ ಅಂಕಿತಕ್ಕೆ ಸಲ್ಲಿಸಲು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 4: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳನ್ನು ಮುಂದುವರೆಸುವ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಸರ್ಕಾರವು ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011ರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಡಳಿತಾಂಗದ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ರಾಜ್ಯ ವೇತನ ಪಡೆಯುವ 51 ಬೋಧಕೇತರ ಹುದ್ದೆಗಳನ್ನು ಸೃಜಿಸಿದೆ. ಅಂತೆಯೇ ಆದೇಶ ಸಂಖ್ಯೆ: ಇಡಿ 218 ಯುಆರ್‌ಸಿ 2010, ದಿನಾಂಕ: 15.06.2011ರಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಒಟ್ಟು 24 ಹುದ್ದೆಗಳನ್ನು [ನಿಯೋಜನೆ/ಪ್ರತಿನಿಯೋಜನೆ/ನೇಮಕಾತಿ/ಹೊರಗುತ್ತಿಗೆ ಆಧಾರದ ಮೇಲೆ(ಡಾಟಾ ಎಂಟ್ರಿ ಆಪರೇಟರ್ ಮತ್ತು ಡಿ ದರ್ಜೆ ನೌಕರರು)] ತುಂಬಿಕೊಳ್ಳಲು ಅನುಮತಿ ನೀಡಿದೆ. ಆದರೆ, ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯು ಸರ್ಕಾರದಿಂದ ಅನುಮೋದನೆಗೊಳ್ಳದ ಹಿನ್ನೆಲೆಯಲ್ಲಿ, ಈ ಹುದ್ದೆಗಳಿಗೆ ಎದುರಾಗಿ ಈ ಕೆಳಗೆ ತಿಳಿಸಲಾಗಿರುವ ಅಗತ್ಯ ಸಿಬ್ಬಂದಿಗಳನ್ನು ನಿಯಮಾನುಸಾರ ವಿವಿಧ ಸಂಸ್ಥೆಗಳಿಂದ ದರಪಟ್ಟಿಗಳನ್ನು ಕರೆದು, ಕಡಿಮೆ ದರ ಸೂಚಿಸಿರುವ ಮಾನಸ ಎಂಟರ್‌ಪ್ರೈಸಸ್, ಬೆಂಗಳೂರು – ಈ ಸಂಸ್ಥೆಯಿಂದ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ಈ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳಲಾಗಿದೆ. ಈ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನವು ಹೊರಗುತ್ತಿಗೆ ಸಿಬ್ಬಂದಿಯನ್ನು ಒದಗಿಸುವ ಸರ್ಕಾರಿಸ್ವಾಮ್ಯದ ಕಿಯೋನಿಕ್ಸ್ ಸಂಸ್ಥೆಯು ಪಾವತಿಸುವ ವೇತನಕ್ಕಿಂತ ಕಡಿಮೆಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ದಿನಾಂಕ: 05.12.2011ರಂದು ನಡೆದ ಪ್ರಶಾಸನ ಸಮಿತಿಯ ಮೊದಲನೇ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯ ಸಂಖ್ಯೆ 2ರಲ್ಲಿ ಅನುಮತಿಯನ್ನು ಪಡೆದುಕೊಂಡು ಈ ಕೆಳಗಿನಂತೆ ವೇತನವನ್ನು ಪಾವತಿಸಲಾಗುತ್ತಿತ್ತು.

| ಕ್ರ.ಸಂ. | ಹುದ್ದೆ | ವೇತನ | ವಿಶ್ವವಿದ್ಯಾಲಯ | ನಿರ್ದೇಶನಾಲಯ |
|---|---|---|---|---|
| 01. | ಪ್ರಥಮ ದರ್ಜೆ ಸಹಾಯಕರು | 10,000/– | 01 | – |
| 02. | ಕಂಪ್ಯೂಟರ್ ಆಪರೇಟರ್ | 9,000/– | 01 | – |
| 03. | ದ್ವಿತೀಯ ದರ್ಜೆ ಸಹಾಯಕರು | 8,500/– | 01 | 02 |
| 04. | ವಾಹನ ಚಾಲಕರು | 8,500/– | 02 | – |
| 05. | ಡಾಟಾ ಎಂಟ್ರಿ ಆಪರೇಟರ್ | 6,500/– | – | 02 |
| 06. | 'ಡಿ' ದರ್ಜೆ ನೌಕರರು | 6,000/– | 03 | 01 |

ಪ್ರಸ್ತುತ 2012–13ನೇ ಸಾಲಿನಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಮುಂದುವರೆಸುವ ಸಂಬಂಧವಾಗಿ ವಿವಿಧ ಸಂಸ್ಥೆಗಳಿಂದ ಹೊಸದಾಗಿ ದರಪಟ್ಟಿಗಳನ್ನು ಕರೆಯಲಾಗಿತ್ತು. ಅದರಂತೆ ಮಾನಸ ಎಂಟರ್‌ಪ್ರೈಸಸ್ ಸಂಸ್ಥೆಯವರು ತಮ್ಮ ಹಿಂದಿನ ದರವನ್ನೇ ಸೂಚಿಸಿದ್ದು, ಈ ದರವು ಇತರೆ ಸಂಸ್ಥೆಗಳು ಸೂಚಿಸಿರುವ ದರಗಳಿಗಿಂತ ಕಡಿಮೆಯಾಗಿರುತ್ತದೆ. ಆದುದರಿಂದ

ಮಾನಸ ಎಂಟರ್‌ಪ್ರೈಸಸ್ ಸಂಸ್ಥೆಯೊಂದಿಗೆ ಹೊಸದಾಗಿ ಕರಾರನ್ನು ಮಾಡಿಕೊಂಡು ಆ ಸಂಸ್ಥೆಯು ಒದಗಿಸಿರುವ ಸಿಬ್ಬಂದಿಗಳನ್ನೇ ಮುಂದುವರೆಸಲಾಗಿದೆ. ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಲಾಗಿದೆ.

ನಿರ್ಣಯ: **ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 5: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಸಂಸ್ಕೃತ ಪಾಠಶಾಲೆಗಳಿಗೆ ಸಹ–ಶಿಕ್ಷಕರ ನೇಮಕಾತಿ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು –ಇವರ ಪತ್ರ ಸಂಖ್ಯೆ: ಇಡಿ 11 ಎಲ್‌ಎಸ್‌ಇ 2010, ದಿನಾಂಕ: 04.10.2010ರ ಪ್ರಕಾರ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ನಿವೃತ್ತಿ/ ಮರಣ/ರಾಜೀನಾಮೆಯಿಂದ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ ಹುದ್ದೆಗಳ ಒಟ್ಟು ಸಂಖ್ಯೆ: 41.

ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು –ಇವರ ಪತ್ರ ಸಂಖ್ಯೆ: ಇಡಿ 154 ಯುಪಿಸಿ 2009, ದಿನಾಂಕ: 25.01.2011ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ –ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ ಮಾನ್ಯ ಮುಖ್ಯಮಂತ್ರಿಗಳ ಸೂಚನೆಯಂತೆ ಆರ್ಥಿಕ ಮಿತವ್ಯಯ ಆದೇಶ ಸಡಿಲಿಸಿ ವೇತನಾನುದಾನದೊಂದಿಗೆ ಮಂಜೂರಾತಿ ನೀಡಿದ ಹುದ್ದೆಗಳ ಒಟ್ಟು ಸಂಖ್ಯೆ: 25.

ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ) ಬಹುಮಹಡಿಗಳ ಕಟ್ಟಡ, ಬೆಂಗಳೂರು –ಇವರ ಪತ್ರ ಸಂಖ್ಯೆ: ಇಡಿ 12 ಯುಡಿವಿ 2011, ದಿನಾಂಕ: 11.11.2011ರಂದು ಪಂ. ಪುಟ್ಟರಾಜ ಗವಾಯಿಗಳವರ ಸಂಸ್ಕೃತ ಪಾಠಶಾಲೆ, ಗದಗ –ಈ ಶಾಲೆಗೆ ಅನುದಾನಸಹಿತ ಅನುಮೋದನೆ ಮಾಡಿದ ಹುದ್ದೆಗಳ ಸಂಖ್ಯೆ: 02.

ಮೇಲ್ಕಂಡ ಸರ್ಕಾರಿ ಆದೇಶಗಳನ್ವಯ ಸಂಬಂಧಿಸಿದ ಶಾಲಾ ಆಡಳಿತ ಮಂಡಳಿಯವರಿಗೆ ದಿನಾಂಕ: 26.06.1995ರ ಮೀಸಲಾತಿ ನಿಯಮ ಹಾಗೂ ನೇಮಕಾತಿ ನಿಯಮಗಳನ್ನು ಅನುಸರಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿತ್ತು. ಅದರಂತ ಆಡಳಿತ ಮಂಡಳಿಯವರು ನೇಮಕಾತಿ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಿ ಮಾಡಿಕೊಂಡಿರುವ ನೇಮಕಾತಿಗಳನ್ನು ಅನುಮೋದಿಸಿರುವ ಒಟ್ಟು ಹುದ್ದೆಗಳ ಸಂಖ್ಯೆ: 64. ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು –ಇದರ ಆಶ್ರಯದಲ್ಲಿ ನಡೆಯುತ್ತಿರುವ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇದ್ದ ಹುದ್ದೆಗಳ ನೇಮಕಾತಿ ಭರ್ತಿ ಮಾಡಿಕೊಳ್ಳುವ ಬಗ್ಗೆ ಚಾಲನೆಯಲ್ಲಿರುವ ಹುದ್ದೆಗಳ ಸಂಖ್ಯೆ: 04.

**ಹೊಸದಾಗಿ ಅನುಮೋದನೆಗೊಂಡ ಶಿಕ್ಷಕರ ವಿವರ**

| ಕ್ರ. ಸಂ. | ಪಾಠಶಾಲೆಯ ಹೆಸರು | ಸಂಖ್ಯೆ | ಶಿಕ್ಷಕರ ಹೆಸರು | ಅನುಮೋದನೆ ಗೊಂಡ ದಿನಾಂಕ | ಮೀಸಲಾತಿ |
|---|---|---|---|---|---|
| 01 | ಶ್ರೀ ಶಿವಾನಂದ ಸಂಸ್ಕೃತ ಪಾಠಶಾಲೆ, ಮುಗ್ಗೊಂಡನಹಳ್ಳಿ, ಕೊರಟಗೆರೆ ತಾಲ್ಲೂಕು ತುಮಕೂರು ಜಿಲ್ಲೆ | 01 | ಶಕುಂತಲ ಶಿವಪ್ಪ ಓಜಗನವರ್ | 25.08.2011 | ಸಾಮಾನ್ಯ |
| 02 | ಸಂಸ್ಕೃತ ಪಾಠಶಾಲೆ, ದಾರಿನಾಯಕನಪಾಳ್ಯ, ಗೌರಿಬಿದನೂರು ತಾ, ಚಿಕ್ಕಬಳ್ಳಾಪುರ ಜಿಲ್ಲೆ | 01 | ಉಮಾದೇವಮ್ಮ ಸಿ.ಎಲ್. | 04.10.2011 | ಪರಿಶಿಷ್ಟಜಾತಿ |
| 03 | ಶ್ರೀ ಪಟ್ಟಾಭಿರಾಮ ಸಂಸ್ಕೃತ ಪಾಠಶಾಲೆ ರಾಮನಾಥಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ | 01 | ಉಮಾಶಂಕರ್ | 10.10.2011 | ಸಾಮಾನ್ಯ |
| 04 | ಕರ್ನಾಟಕ ವಿದ್ಯಾ ಮತ್ತು ಸಾಂಸ್ಕೃತಿಕ ಸಂಘ ಸಂಸ್ಕೃತ ಪಾಠಶಾಲೆ, ನಾಗಪ್ಪಬೀದಿ, ಪಿ.ಜಿ.ಹಳ್ಳಿ, ಬೆಂಗಳೂರು–560003 | 01 | ಸಿದ್ಧರಾಜು ಡಿ.ಕೆ. | 18.10.2011 | ಪರಿಶಿಷ್ಟಜಾತಿ |
| 05 | ವಿದ್ಯಾನಿವೇದಿತಾ ಸಂಸ್ಕೃತ ಪಾಠಶಾಲೆ 9ನೇ ಅಡ್ಡರಸ್ತೆ, ಮಂಜುನಾಥನಗರ, ಬೆಂಗಳೂರು–10 | 01 | ಕೆಂಪಮ್ಮ | 18.10.2011 | ಪರಿಶಿಷ್ಟಜಾತಿ |
| 06 | ಕಲ್ಪತರು ಸಂಸ್ಕೃತ ಪಾಠಶಾಲೆ ಮಾಯಸಂದ್ರ ತುರುವೇಕೆರೆ ತಾಲ್ಲೂಕು ತುಮಕೂರು ಜಿಲ್ಲೆ | 02 | ಟಿ.ಎಸ್. ಕುಮಾರಸ್ವಾಮಿ | 24.10.2011 | ಸಾಮಾನ್ಯ |
| | | | ವಿ.ಹೆಚ್. ಲೋಕೇಶ್ | | ಪರಿಶಿಷ್ಟಜಾತಿ |
| 07 | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಮಹಾವಿದ್ಯಾಲಯ, ಶ್ರೀಸಿದ್ಧಗಂಗಾಮಠ, ತುಮಕೂರು | 25 | ವಿ.ಹೆಚ್. ಸುರೇಶ್ | 26.10.2011 | ಪರಿಶಿಷ್ಟ ಜಾತಿ |
| | | | ಟಿ.ಎಸ್. ಸಿದ್ಧಗಂಗಪ್ಪ | | ಸಾಮಾನ್ಯ |
| | | | ಎಲ್. ರಮೇಶ್ | | 3–ಬಿ |
| | | | ಕೆ.ಎಸ್. ಸುರೇಶ್ | | ಸಾಮಾನ್ಯ |
| | | | ಡಿ. ನಿರ್ಮಲಾದೇವಿ | | 2–ಎ |
| | | | ಎಂ.ಎಸ್. ಸುರೇಶ್‌ಕುಮಾರ್ | | ಸಾಮಾನ್ಯ |
| | | | ಎಸ್. ದೇವರಾಜು | | ಪರಿಶಿಷ್ಟಜಾತಿ |
| | | | ಹೆಚ್.ಆರ್. ಬಸವರಾಜು | | ಸಾಮಾನ್ಯ |
| | | | ಕೆ.ವಿ. ಕೃಷ್ಣಪ್ಪ | | 3–ಎ |

| | | | | | |
|---|---|---|---|---|---|
| | | | ಹೆಚ್.ಎನ್. ಸುರೇಶ್‌ಕುಮಾರ್ | | ಸಾಮಾನ್ಯ |
| | | | ಜಗದೀಶ್ | | 3–ಬಿ |
| | | | ಎನ್. ಗಂಗರಾಜ | | ಸಾಮಾನ್ಯ |
| | | | ಕೆ.ಜಿ. ಶಿವರಾಮಯ್ಯ | | 2–ಎ |
| | | | ಕೆ.ಎಸ್. ರುದ್ರೇಶಯ್ಯ | | ಸಾಮಾನ್ಯ |
| | | | ಆರ್. ಶಿವಕುಮಾರಸ್ವಾಮಿ | | ಪರಿಶಿಷ್ಟಜಾತಿ |
| | | | ಸಿ. ದಿನೇಶ್ | | ಸಾಮಾನ್ಯ |
| | | | ಜಿ. ರಮೇಶ್ | | 2–ಎ |
| | | | ಎಂ.ಸಿ. ಯೋಗೀಶ್ | | ಸಾಮಾನ್ಯ |
| | | | ಜಿ. ಹನುಮಂತರಾಜು | | ಪರಿಶಿಷ್ಟಜಾತಿ |
| | | | ಹೆಚ್.ಎನ್. ಲೋಕೇಶ್ | | ಸಾಮಾನ್ಯ |
| | | | ಕೆ. ಮಲ್ಲಪ್ಪ | | 2–ಎ |
| | | | ಶೋಭಾ | | ಸಾಮಾನ್ಯ |
| | | | ಜಿ. ಗಂಗಾಂಬಿಕೆ | | ವರ್ಗ–1 |
| | | | ಎಸ್. ಪ್ರಕಾಶ | | ಸಾಮಾನ್ಯ |
| | | | ಸಿದ್ಧರಾಜು | | ಪರಿಶಿಷ್ಟ ಜಾತಿ |
| 08 | ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ, ಬ್ರೂಸ್‌ಪೇಟೆ, ರೆಡ್ಡಿಬೀದಿ, ಬಳ್ಳಾರಿ | 01 | ಟಿ. ಪವಿತ್ರ | 09.11.2011 | ಪರಿಶಿಷ್ಟ ಜಾತಿ |
| 09 | ಶ್ರೀ ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪಾಠಶಾಲೆ, ಕಬೀರಾನಂದಸ್ವಾಮಿನಗರ, ಚಿತ್ರದುರ್ಗ | 01 | ಜಿ. ಮಂಜಣ್ಣ | 09.11.2011 | ಪರಿಶಿಷ್ಟ ಜಾತಿ |
| 10 | ಶ್ರೀ ಗಜಾನನ ಸಂಸ್ಕೃತ ಪಾಠಶಾಲೆ ಶಿವಪ್ಪನಾಯಕನಗರ, ಸಾಗರ, ಶಿವಮೊಗ್ಗ ಜಿಲ್ಲೆ | 01 | ಚೇತನಾ ಕೆ.ಎನ್. | 09.11.2011 | ಸಾಮಾನ್ಯ |
| 11 | ಶ್ರೀ ಗುರುಮಲ್ಲೇಶ್ವರ ಸಂಸ್ಕೃತ ವೇದ–ಆಗಮ ಜೋತಿಷ್ಯ ಪಾಠಶಾಲೆ, ದೇವನೂರು, ನಂಜನಗೂಡು ತಾ॥ ಮೈಸೂರು ಜಿಲ್ಲೆ | 01 | ನಂಜನಾಯಕ ಸಿ.ಜಿ. | 16.11.2011 | ಪರಿಶಿಷ್ಟಪಂಗಡ |
| 12 | ಉಭಯಭಾರತಿ ವಿದ್ಯಾಮಂದಿರ ಸಂಸ್ಕೃತ ಪಾಠಶಾಲೆ, ಹುಲಗುಂಡಿ ಬೇಲೂರು ತಾ॥ ಹಾಸನಜಿಲ್ಲೆ | 01 | ಹರೀಶ್ ಪಿ.ಎಲ್. | 22.11.2011 | ಪರಿಶಿಷ್ಟ ಜಾತಿ |
| 13 | ವಿದ್ವನ್ನಹರಿಶಾಸ್ತ್ರಿಗಳವರ ಸಂಸ್ಕೃತ ಪಾಠಶಾಲೆ, ಮುತ್ತೂರು, ಮಳೂರು ಅಂಚೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | 01 | ಸುಧಾರಾಣಿ ಸಿ.ಎಲ್. | 16.12.2011 | ಪರಿಶಿಷ್ಟ ಜಾತಿ |
| 14 | ವನವಾಸಿ ಶ್ರೀರಾಮಮಂದಿರ ಸಂಸ್ಕೃತ ಪಾಠಶಾಲೆ, ಮಾಳಮಡ್ಡಿ, ಧಾರವಾಡ | 01 | ಸುಧೀಂದ್ರ ಶೇ ಗಿರಿಭಟ್ಟನವರ | 17.12.2011 | ಸಾಮಾನ್ಯ |
| 15 | ಶ್ರೀ ವೇಣುಗೋಪಾಲಸ್ವಾಮಿ ಸಂಸ್ಕೃತ ಪಾಠಶಾಲೆ ದೊಡ್ಡಮಗ್ಗೆ, ಅರಕಲಗೂಡು ತಾ॥, ಹಾಸನ ಜಿಲ್ಲೆ | 01 | ವತ್ಸಲಾ ಕೆ. | 24.12.2011 | ಸಾಮಾನ್ಯ |
| 16 | ಸಂಸ್ಕೃತ ಪಾಠಶಾಲೆ, ಚಿಕ್ಕಬಳ್ಳಾಪುರ | 02 | ಪಿ.ಕೆ. ರಂಗನಾಥ್ | 21.12.2011 | ಸಾಮಾನ್ಯ |
| | | | ಪುಟ್ಟಸ್ವಾಮಿ | | ಪರಿಶಿಷ್ಟ ಜಾತಿ |
| 17 | ಶ್ರೀ ಸಾಯಿನಾಥ ಸಂಸ್ಕೃತ ಪಾಠಶಾಲೆ ಕೋಟೆ, ಚನ್ನಪಟ್ಟಣ, ರಾಮನಗರ ಜಿಲ್ಲೆ | 01 | ಯೋಗೇಶ್ ಕೆ.ಪಿ. | 27.12.2011 | ಸಾಮಾನ್ಯ |
| 18 | ಡಾ: ಪಂಡಿತ ಪುಟ್ಟರಾಜ ಗವಾಯಿಗಳವರ ಸಂಸ್ಕೃತ ಪಾಠಶಾಲೆ ಗದಗ | 02 | ಎಸ್.ಎಸ್. ಸಾಲಿಮಠ | 27.12.2011 | ಸಾಮಾನ್ಯ |
| | | | ಪಂಚಯ್ಯ ಫಕೀರಯ್ಯ | | ಸಾಮಾನ್ಯ |
| 19 | ಶ್ರೀ ಗಂಗಾಧರೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ, ಶ್ರೀಕ್ಷೇತ್ರ, ಸಿದ್ಧರಬೆಟ್ಟ, ಕೊರಟಗೆರೆ ತಾ. ತುಮಕೂರು ಜಿಲ್ಲೆ | 02 | ಎನ್.ಸಿ. ಚಂದ್ರಶೇಖರಯ್ಯ | 06.01.2012 | ಸಾಮಾನ್ಯ |
| | | | ಎಸ್. ಶ್ರೀನಿವಾಸ | | ಪರಿಶಿಷ್ಟ ಜಾತಿ |
| 20 | ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆ ದೇಗುಲಮಠ, ಕನಕಪುರ ರಾಮನಗರ ಜಿಲ್ಲೆ | 02 | ವಿ.ಎಲ್. ಧನಲಕ್ಷ್ಮಿ | 07.01.2012 | ಪರಿಶಿಷ್ಟ ಜಾತಿ |
| | | | ಮಹಾಲಿಂಗಪ್ರಭು ಜಿ.ಎಂ. | | ಸಾಮಾನ್ಯ |
| 21 | ಶಾಂತಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ ಶ್ರೀ ಸಾಲೂರು ಮಠ, ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾ॥ ಚಾಮರಾಜನಗರ ಜಿಲ್ಲೆ | 02 | ಎಂ. ರವಿಕುಮಾರ್ | 07.01.2012 | ಸಾಮಾನ್ಯ |
| | | | ಡಿ. ಗೋವಿಂದ | | ಪರಿಶಿಷ್ಟ ಜಾತಿ |
| 22 | ಶ್ರೀ ರೇಣುಕಾ ಎಲ್ಲಮ್ಮ ಸಂಸ್ಕೃತ ಪಾಠಶಾಲೆ, ಸವದತ್ತಿ ಬೆಳಗಾವಿ ಜಿಲ್ಲೆ | 01 | ಸದಾನಂದ ದೀಕ್ಷಿತ್ | 13.01.2012 | ಸಾಮಾನ್ಯ |
| 23 | ಶ್ರೀ ದಿಡ್ಡಿಆಂಜನೇಯಸ್ವಾಮಿ ಸಂಸ್ಕೃತ ಪಾಠಶಾಲೆ, ಹೊನ್ನಾಳಿ, ದಾವಣಗೆರೆಜಿಲ್ಲೆ | 02 | ಮನೋಹರ ಹೆಚ್.ಕೆ. | 10.01.2012 | ಸಾಮಾನ್ಯ |
| | | | ಸಿದ್ಧರಾಜು | | ಪರಿಶಿಷ್ಟ ಜಾತಿ |
| 24 | ಜ್ಞಾನಗಂಗಾ ಸಂಸ್ಕೃತ ಪಾಠಶಾಲೆ ರಾಯಚೂರು | 01 | ಶ್ರೀನಿವಾಸಮೂರ್ತಿ ಸಿ.ಟಿ | 19.01.2012 | ಪರಿಶಿಷ್ಟ ಜಾತಿ |
| 25 | ಶ್ರೀ ಗಣೇಶ ಸಂಸ್ಕೃತ ವೇದ ಜ್ಯೋತಿಷ್ಯ ಪಾಠಶಾಲೆ, ಕೃಷ್ಣಮೂರ್ತಿಪುರಂ, ಮೈಸೂರು–04 | 03 | ತುಳಸಿ ಬಿ. | 10.02.2012 | ಪರಿಶಿಷ್ಟ ಜಾತಿ |
| | | | ಗಣೇಶಮೂರ್ತಿ ಹೆಚ್.ಎಸ್. | | ಸಾಮಾನ್ಯ |
| | | | ನವೀನ್ ಎನ್ | | ಪರಿಶಿಷ್ಟ ಪಂಗಡ |
| 26 | ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ, ಯಡಿಯೂರು, ಕುಣಿಗಲ್ ತಾ., ತುಮಕೂರು ಜಿಲ್ಲೆ | 01 | ಮೂರ್ತಿ ವಿ.ಹೆಚ್. | 25.02.2012 | ಪರಿಶಿಷ್ಟ ಜಾತಿ |

| | | | | | |
|---|---|---|---|---|---|
| 27 | ಶ್ರೀ ಸ್ವರ್ಣಾಂಬ ಸಂಸ್ಕೃತ ಪಾಠಶಾಲೆ ಶಿವಗಂಗೆ, ನೆಲಮಂಗಲ ತಾಲ್ಲೂಕು ಗ್ರಾಮಾಂತರ ಜಿಲ್ಲೆ | 01 | ಡಿ.ಸಿ. ಶೋಭ | 01.03.2012 | ಪರಿಶಿಷ್ಟ ಜಾತಿ |
| 28 | ಭಾರತೀ ಸಂಸ್ಕೃತ ಪಾಠಶಾಲೆ, ಭೈರುಂಬೆ, ಶಿರಸಿ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ | 02 | ಕೃಷ್ಣಮೂರ್ತಿ ಹೆಗಡೆ | 05.03.2012 | ಸಾಮಾನ್ಯ |
| | | | ತಿಮ್ಮಯ್ಯ ವಿ. | | ಪರಿಶಿಷ್ಟ ಜಾತಿ |
| 29 | ಸಂಸ್ಕೃತ ಪಾಠಶಾಲೆ, ಮತ್ತೂರು, ಶಿವಮೊಗ್ಗ ಜಿಲ್ಲೆ | 02 | ಅನಂತಕೃಷ್ಣ | 16.03.2012 | ಸಾಮಾನ್ಯ |
| | | | ರಾಮಚಂದ್ರಪ್ಪ ಕೆ.ಹೆಚ್. | | ಪರಿಶಿಷ್ಟ ಜಾತಿ |
| | **ಒಟ್ಟು ಹುದ್ದೆಗಳು** | **64** | | | |

ನಿರ್ಣಯ: **ಸಭೆಯು ಸಮಗ್ರವಾಗಿ ಪರಿಶೀಲಿಸಿ ಯುಕ್ತ ರೀತಿಯಲ್ಲಿ ಸಹಶಿಕ್ಷಕರ ನೇಮಕಾತಿ ಆಗಿರುವುದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿತು. ಎಲ್ಲಾ 64 ಸಹಶಿಕ್ಷಕ ಹುದ್ದೆಗಳಿಗೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 6: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಸಂಸ್ಕೃತ ಪಾಠಶಾಲೆಗಳ ಶಿಕ್ಷಕರ ನೇಮಕಾತಿ ಮಾಡುವ ಬಗೆಗೆ.**

ಟಿಪ್ಪಣಿ: ರಾಜ್ಯದಲ್ಲಿ ನಡೆಯುತ್ತಿರುವ ಖಾಸಗಿ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಬಹುತೇಕ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿದ್ದು, ಈಗಾಗಲೇ ಅನುದಾನಕ್ಕೆ ಒಳಪಟ್ಟಿರುವ ಶಾಲೆಗಳಲ್ಲಿ ಆಗಿಂದಾಗ್ಗೆ ನಿವೃತ್ತಿ/ನಿಧನ/ಬಡ್ತಿ/ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಶಾಲಾ ಹಿತದೃಷ್ಟಿಯಿಂದ ಹಾಗೂ ಭಾಷಾ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು ಅವಶ್ಯವಾಗಿರುವುದರಿಂದ ಅನುಮತಿ ನೀಡಲು ಅನುಮೋದನೆ ಕೋರಿದೆ.

| ಕ್ರ.ಸಂ. | ಪಾಠಶಾಲೆಯ ಹೆಸರು | ಖಾಲಿ ಹುದೆಗಳ ಸಂಖ್ಯೆ | ಹುದ್ದೆ ಖಾಲಿಯಾದ ಬಗೆ |
|---|---|---|---|
| 01 | ಶ್ರೀಕಾಂತ ಸಂಸ್ಕೃತ ಪಾಠಶಾಲೆ, ಖಿಲ್ಲೆಮೊಹಲ್ಲಾ, ಮೈಸೂರು | 02 | ನಿಧನ/ರಾಜೀನಾಮೆ |
| 02 | ತೆಗ್ಗಿನಮಠ ಸಂಸ್ಕೃತ ಪಾಠಶಾಲೆ ಹರಪನಹಳ್ಳಿ, ದಾವಣಗೆರೆ ಜಿಲ್ಲೆ | 02 | ನಿಧನ |
| 03 | ಮಡಿವಾಳ ಸಂಸ್ಕೃತ ಪಾಠಶಾಲೆ ರಾಮಾನುಜ ರಸ್ತೆ, ಮೈಸೂರು | 01 | ವರ್ಗಾವಣೆ |
| 04 | ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ ಮಳವಳ್ಳಿ, ಮಂಡ್ಯ ಜಿಲ್ಲೆ | 01 | ನಿವೃತ್ತಿ (ಏಕೋಪಾಧ್ಯಾಯ ಶಾಲೆ) |
| 05 | ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ, ಲಕ್ಷ್ಮೇಶ್ವರ, ಗದಗ ಜಿಲ್ಲೆ | 01 | ವಯೋನಿವೃತ್ತಿ |
| 06 | ಜಗದ್ಗುರು ಗುರುಸಿದ್ಧೇಶ್ವರ ಸಂಸ್ಕೃತ ಪಾಠಶಾಲೆ, ಗುಳೇದಗುಡ್ಡ, ಬಾಗಲಕೋಟೆ ಜಿಲ್ಲೆ | 01 | ಅನಧಿಕೃತ ಗೈರುಹಾಜರಿ |
| 07 | ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಬಹುಳಾಪುರ, ಕುಂದಾಪುರ ತಾ॥ | 01 | ವಯೋನಿವೃತ್ತಿ |
| 08 | ಸಂಸ್ಕೃತ ಪಾಠಶಾಲೆ, ಉತ್ತರ ಬಡಾವಣೆ ಹಾಸನ | 01 | ವಯೋನಿವೃತ್ತಿ |
| 09 | ನಾಗಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ ಆಲಂಗಾರು, ಮೂಡಬಿದರೆ ತಾ, ದಕ್ಷಿಣ ಕನ್ನಡ ಜಿಲ್ಲೆ | 01 | ವಯೋನಿವೃತ್ತಿ |
| 10 | ಮಹದೇಶ್ವರ ಸಂಸ್ಕೃತ ಪಾಠಶಾಲೆ ಒಡೆಯರಪಾಳ್ಯ, ಕೊಳ್ಳೇಗಾಲ ತಾ. ಚಾಮರಾಜನಗರ ಜಿಲ್ಲೆ | 01 | ವಯೋನಿವೃತ್ತಿ |
| 11 | ಮಹದೇಶ್ವರ ಸಂಸ್ಕೃತ ಪಾಠಶಾಲೆ ಪಿ.ಜಿ.ಪಾಳ್ಯ, ಕೊಳ್ಳೇಗಾಲ ತಾ. ಚಾಮರಾಜನಗರ ಜಿಲ್ಲೆ | 01 | ವರ್ಗಾವಣೆ |
| 12 | ವಿದ್ವನ್ನರಹರಿಶಾಸ್ತ್ರಿಗಳವರ ಸಂಸ್ಕೃತ ಪಾಠಶಾಲೆ, ಮುತ್ತೂರು, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | 01 | ವಯೋನಿವೃತ್ತಿ |
| 13 | ಜಗಜ್ಯೋತಿಬಸವೇಶ್ವರ ಸಂಸ್ಕೃತ ಪಾಠಶಾಲೆ ರಾಜಾಜಿನಗರ ಬೆಂಗಳೂರು | 01 | ವಯೋನಿವೃತ್ತಿ (ಏಕೋಪಾಧ್ಯಾಯ ಶಾಲೆ) |
| 14 | ವಾಣೀವಿಲಾಸ ಸಂಸ್ಕೃತ ಪಾಠಶಾಲೆ ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ | 01 | ವಯೋನಿವೃತ್ತಿ (ಏಕೋಪಾಧ್ಯಾಯ ಶಾಲೆ) |
| 15 | ಶಿವನಂಜುಂಡೇಶ್ವರ ಸಂಸ್ಕೃತ ಪಾಠಶಾಲೆ ಕಣಕಟ್ಟೆ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ | 01 | ವಯೋನಿವೃತ್ತಿ (ಏಕೋಪಾಧ್ಯಾಯ ಶಾಲೆ) |
| 16 | ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಕುದೇರುಮಠ, ಮೈಸೂರು | 01 | ವಯೋನಿವೃತ್ತಿ |
| 17 | ಸಿದ್ಧಾರೂಢಸ್ವಾಮಿ ಸಂಸ್ಕೃತ ಪಾಠಶಾಲೆ, ಸಿದ್ಧರೂಡಮಠ, ಹುಬ್ಬಳ್ಳಿ | 01 | ವಯೋನಿವೃತ್ತಿ |
| 18 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಪಾಠಶಾಲೆ, ಸಾಲ್ಕಣಿ, ಶಿರಸಿ ತಾ., ಉತ್ತರಕನ್ನಡ ಜಿಲ್ಲೆ | 03 | ವಯೋನಿವೃತ್ತಿ–01 / ಬಡ್ತಿ–02 |
| 19 | ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಮಕ್ಕಿದೇವಸ್ಥಾನ ಬಹುಳಾಪುರ, ಕುಂದಾಪುರ ತಾ॥, ಉಡುಪಿ ಜಿಲ್ಲೆ | 02 | ರಾಜೀನಾಮೆ ವಯೋನಿವೃತ್ತಿ |
| 20 | ಸಂಸ್ಕೃತ ವೇದ ಜ್ಯೋತಿಷ್ಯ ಪಾಠಶಾಲೆ ಬೀರೂರು, ಕಡೂರು ತಾ. ಚಿಕ್ಕಮಗಳೂರು ಜಿಲ್ಲೆ | 01 | ವರ್ಗಾವಣೆ |
| 21 | ಸುಬ್ರಹ್ಮಣ್ಯೇಶ್ವರ ಸಂಸ್ಕರತ ಪಾಠಶಾಲೆ ಕಳಸ, ಮೂಡಗೆರೆ ತಾ. ಚಿಕ್ಕಮಗಳೂರು ಜಿಲ್ಲೆ | 01 | ಮರಣ |
| 22 | ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ ಶಿವಬಸವನಗರ, ಬೆಳಗಾವಿ | 02 | ವಯೋನಿವೃತ್ತಿ |
| 23 | ಅಂಬುಜಾ ಸಂಸ್ಕೃತ ಪಾಠಶಾಲೆ ಶಿವನಗರ, ಬೆಂಗಳೂರು | 01 | ವರ್ಗಾವಣೆ |
| 24 | ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಕೆ.ಬಂಡೇಮಠ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ | 01 | ರಾಜೀನಾಮೆ |
| 25 | ಸಿದ್ಧಿವಿನಾಯಕ ಸಂಸ್ಕೃತ ಪಾಠಶಾಲೆ ಖರ್ವಾ, ಹೊನ್ನವರ ತಾ., ಉತ್ತರಕನ್ನಡ ಜಿಲ್ಲೆ | 01 | ವಯೋನಿವೃತ್ತಿ |
| 26 | ಸಿದ್ಧಿವಿನಾಯಕ ಸಂಸ್ಕೃತ ಪಾಠಶಾಲೆ ಹಾಳದಕಟ್ಟಾ, ಸಿದ್ಧಾಪುರ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ | 01 | ವಯೋನಿವೃತ್ತಿ |

| | | | |
|---|---|---|---|
| 27 | ಶ್ರೀ ನೀಲಕಂಠೇಶ್ವರ ಸಂಸ್ಕೃತ ಪಾಠಶಾಲೆ, ರಾಮಪುರ, ರಬಕವಿ, ಜಮಖಂಡಿ ತಾ. ಬಾಗಲಕೋಟೆ ಜಿಲ್ಲೆ | 01 | ವಯೋನಿವೃತ್ತಿ |
| 27 | ವಾಣೀವಿನಾಯಕ ಸಂಸ್ಕೃತ ಪಾಠಶಾಲೆ ಹೆಗ್ಗರಣೆ, ಸಿದ್ದಾಪುರ ತಾ. ಉತ್ತರ ಕನ್ನಡ ಜಿಲ್ಲೆ | 01 | ವಯೋನಿವೃತ್ತಿ |
| 28 | ಸೋಮೇಶ್ವರ ವೇದವಾಣಿ ಸಂಸ್ಕೃತ ಪಾಠಶಾಲೆ, ಸೋಮಸಾಗರ, ಶಿರಸಿ ತಾ. ಉತ್ತರಕನ್ನಡ ಜಿಲ್ಲೆ | 01 | ವಯೋನಿವೃತ್ತಿ |
| 29 | ಸಂಸ್ಕೃತ ಪಾಠಶಾಲೆ ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಜಿಲ್ಲೆ | 01 | ವಯೋನಿವೃತ್ತಿ |
| 30 | ವಾಣೀಭೂಷಣ ಸಂಸ್ಕೃತ ಪಾಠಶಾಲೆ ನಾಗಮಂಗಲ, ಮಂಡ್ಯ ಜಿಲ್ಲೆ | 01 | ವಯೋನಿವೃತ್ತಿ |
| | **ಒಟ್ಟು ಹುದ್ದೆ** | **38** | |

ನಿರ್ಣಯ: **ಸಭೆಯು ನಿಧನ, ನಿವೃತ್ತಿ ಮತ್ತು ಸ್ವಯಂನಿವೃತ್ತಿ ಮುಂತಾದ ಕಾರಣಗಳಿಂದಾಗಿ ವಿವಿಧ ಪಾಠಶಾಲೆಗಳಲ್ಲಿ ಸಹಶಿಕ್ಷಕರ ಹುದ್ದೆಗಳು ಖಾಲಿ ಇರುವುದನ್ನು ಪರಿಶೀಲಿಸಿತು. ಈ ಎಲ್ಲಾ ಹುದ್ದೆಗಳು 2012–13ನೇ ಸಾಲಿನ ವೇತನಾನುದಾನದ ಅಡಿಯಲ್ಲಿ ಬರುವುದರಿಂದ 2012–13ನೇ ಸಾಲಿನ ಆರ್ಥಿಕ ಮಿತಿಯಲ್ಲಿಯೇ ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಬಹುದೆಂದೂ ಈ ಸಂಬಂಧವಾಗಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಕ್ರಮವಹಿಸಬಹುದೆಂದೂ ಸಭೆಯು ಅಭಿಪ್ರಾಯಪಟ್ಟಿತು.**

**ವಿಷಯ 7: ಸಂಸ್ಕೃತ ಪಾಠಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿಯನ್ನು ನಿಗದಿಗೊಳಿಸುವ ಬಗೆಗೆ.**

ಟಿಪ್ಪಣಿ: ಪ್ರಥಮಾ ಮತ್ತು ಕಾವ್ಯ ತರಗತಿಗಳು ನಡೆಯುತ್ತಿರುವ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಯಾವುದಾದರೂ ವಿಷಯದಲ್ಲಿ ತರಬೇತಿ ಹೊಂದಿದ್ದರೆ, ಅಂತಹ ಶಿಕ್ಷಕರಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಮತ್ತು ವೇತನಶ್ರೇಣಿ ನೀಡಲು **ಅನುದಾನ ಸಂಹಿತೆ ಅಧ್ಯಾಯ 3 ನಿಯಮ 22(7)(ಇ)**ಯಲ್ಲಿ ಅವಕಾಶವಿರುತ್ತದೆ. ಈಗಾಗಲೇ ತರಬೇತಿ ಹೊಂದಿದ ಕೆಲವು ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿ ನೀಡಲಾಗುತ್ತಿದೆ. ಅದರಂತೆ ತರಬೇತಿ ಹೊಂದಿರುವ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿಯನ್ನು ಮಂಜೂರು ಮಾಡಲು ಕೆಳಕಂಡ ಶಿಕ್ಷಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ತರಬೇತಿ ವೇತನಶ್ರೇಣಿ ನೀಡುವಾಗ ಒಂದು ವೇತನ ಬಡ್ತಿ ಮತ್ತು ವೇತನಶ್ರೇಣಿ ನಿಗದಿಗೊಳಿಸುವುದರಿಂದ ಹೆಚ್ಚು ಆರ್ಥಿಕ ಹೊರೆ ಆಗುವುದಿಲ್ಲ. ಮಂಜೂರಾತಿಗಾಗಿ ಸಭೆಯ ಮುಂದೆ ಇರಿಸಿದೆ.

**ತರಬೇತಿ ಹೊಂದಿರುವ ಶಿಕ್ಷಕರ ಪಟ್ಟಿ**

| ಕ್ರ ಸಂ. | ಪಾಠಶಾಲೆಯ ಹೆಸರು | ಶಿಕ್ಷಕರ ಹೆಸರು | ತರಬೇತಿ ವಿವರ | ಹಾಲಿ ಪಡೆಯುತ್ತಿರುವ ವೇತನ/ಶ್ರೇಣಿ | ನಿಗದಿಪಡಿಸಬೇಕಾಗಿರುವ ವೇತನ/ಶ್ರೇಣಿ | ವ್ಯತ್ಯಾಸ |
|---|---|---|---|---|---|---|
| 01 | ಸುಜಾತ ಸಂಸ್ಕೃತ ಪಾಠಶಾಲೆ, ಉಲ್ಲಾಳು ಉಪನಗರ, ಬೆಂಗಳೂರು–56 | ಜಿ. ಶಾಂತ | ಬಿ.ಇಡಿ | 10500/7275–13350 | 10800/8000–14800 | 300 |
| 02 | ಬಿ.ಎಸ್.ವಿ.ಪಿ. ಸಂಸ್ಕೃತ ಪಾಠಶಾಲೆ ಚಾಮರಾಜಪೇಟೆ, ಬೆಂಗಳೂರು | ವೆಂಕಟನರಸಿಂಹಚಾರ್ | ಬಿ.ಇಡಿ | 7100/6250–12000 | 7275/7275–13350 | 175 |
| 03 | ಮನೋನ್ಮನೀ ಸಂಸ್ಕೃತ ಪಾಠಶಾಲೆ ಬಸವನಗುಡಿ, ಬೆಂಗಳೂರು | ಟಿ.ಸಿ. ಅಶ್ವತ್ಥಕುಮಾರ್ | ಬಿ.ಇಡಿ | 11400/7275–13350 | 11700/8000–14800 | 300 |
| 04 | ವಾಸವೀ ಸಂಸ್ಕೃತ ಪಾಠಶಾಲೆ ಜಯನಗರ, ಬೆಂಗಳೂರು | ಎಂ. ನರೇಂದ್ರ | ಬಿ.ಇಡಿ | 8825/6800–13000 | 9050/7275–13350 | 225 |
| 05 | ಸಂಪ್ರದಾಯಿಕ ಸಂಸ್ಕೃತ ಪಾಠಶಾಲೆ ದೊಡ್ಡಬಳ್ಳಾಪುರ | ಜಿ. ಶ್ರೀನಿವಾಸ ರಾಘವನ್ | ಬಿ.ಇಡಿ | 12650/7275–13350 | 13000/8000–14800 | 350 |
| 06 | ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ ಬಸವಣ್ಣದೇವರಮಠ, ನೆಲಮಂಗಲ | ಎಂ.ಆರ್. ವೀರಾಪ್ಪಾಜಿ | ಬಿ.ಇಡಿ | 11100/7275–13350 | 11400/8000–14800 | 300 |
| | | ಆರ್. ಮೃತ್ಯುಂಜಯ | ಬಿ.ಇಡಿ | 10500/7275–13350 | 10800/8000–14800 | 300 |
| | | ಹೆಚ್. ಮುದ್ದಬಸವಯ್ಯ | ಬಿ.ಇಡಿ | 8825/7275–13350 | 9050/8000–14800 | 225 |
| 07 | ಸ್ವರ್ಣಾಂಬ ಸಂಸ್ಕೃತ ಪಾಠಶಾಲೆ ಶಿವಗಂಗೆ, ನೆಲಮಂಗಲ ತಾ॥ | ಎಸ್. ವಿರೂಪಾಕ್ಷಯ್ಯ | ಟಿ.ಸಿ.ಹೆಚ್. | 12650/7275–13350 | 13000/8000–14800 | 350 |
| | | ಡಿ.ಸಿ. ಶೋಭಾ | ಟಿ.ಸಿ.ಹೆಚ್. | 5800/5800–10500 | 6800/6800–13000 | 100 |
| 08 | ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ ಜೈಮಾರುತಿನಗರ, ನಂದಿನಿ ಲೇಔಟ್, ಬೆಂಗಳೂರು | ಸಿ.ಎನ್. ಚಂದ್ರಶೇಖರಯ್ಯ | ಹಿಂದಿ ಶಿಕ್ಷಕ್ | 12000/7275–13350 | 12300/8000–14800 | 300 |
| 09 | ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆ ದೇಗುಲಮಠ, ಕನಕಪುರ | ಆರ್.ಸಿ. ಚಿಕ್ಕಲಿಂಗಪ್ಪ | ಬಿ.ಇಡಿ | 6500/5800–10500 | 6800/6800–13000 | 300 |
| 10 | ಮಹದೇಶ್ವರ ಸಂಸ್ಕೃತ ಪಾಠಶಾಲೆ ಗಟ್ಟಿಪುರ, ಮಾಗಡಿ ತಾ॥ | ಎನ್.ಹೆಚ್. ವಿಶ್ವೇಶ್ವರಯ್ಯ | ಹಿಂದಿ ಶಿಕ್ಷಕ್ | 8400/6800–13000 | 8600/7275–13350 | 200 |
| 11 | ವೈಷ್ಣವಾ ಸಭಾ ಸಂಸ್ಕೃತ ಪಾಠಶಾಲೆ ಪ್ರಕಾಶನಗರ, ಬೆಂಗಳೂರು | ವಿ.ಆರ್. ಅನಂತನ್ | ಶಿಕ್ಷಾಶಾಸ್ತ್ರೀ | 9050/7275–13350 | 9275/8000–14800 | 225 |
| 12 | ಶಂಕರಭಾರತೀ ಸಂಸ್ಕೃತ ಪಾಠಶಾಲೆ ಸೋಮೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ | ಎಸ್.ಎಲ್. ಬಾಲಸುಬ್ರಹ್ಮಣ್ಯಂ | ಟಿ.ಸಿ.ಹೆಚ್. | 6800/5800–10500 | 6950/6800–13000 | 150 |
| 13 | ಉಜ್ಜಯಿನಿ ಜಗದ್ಗುರು ಸಂಸ್ಕೃತ ಪಾಠಶಾಲೆ ಚಿತ್ರದುರ್ಗ | ಕೆ.ಎಂ. ಲಲಿತಾಕ್ಷಿದೇವಿ | ಟಿ.ಸಿ.ಹೆಚ್. | 13000/7275–13350 | 13350/8000–14800 | 350 |
| | | ಕೆ.ಎಂ. ನಾಗರತ್ನಮ್ಮ | ಟಿ.ಸಿ.ಹೆಚ್. | 13000/7275–13350 | 13350/8000–14800 | 350 |

| | | | | | | |
|---|---|---|---|---|---|---|
| 14 | ತರಳಬಾಳು ಜಗದ್ಗುರು ಸಂಸ್ಕೃತ ಪಾಠಶಾಲೆ ಸಿರಿಗೆರೆ, ಚಿತ್ರದುರ್ಗ ಜಿಲ್ಲೆ | ಎಂ.ಎಂ. ಕರೇಗೌಡರ್ | ಬಿ.ಇಡಿ | 10500/7275-13350 | 10800/8000-14800 | 300 |
| 15 | ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಹಿರೇಕಲ್ಮಠ, ಹೊನ್ನಾಳಿ | ಎಂ.ಆರ್. ಶ್ರೀಧರ್ | ಬಿ.ಇಡಿ | 11400/7275-13350 | 11700/8000-14800 | 300 |
| 16 | ಸಂಸ್ಕೃತ ಪಾಠಶಾಲೆ ಮತ್ತೂರು ಶಿವಮೊಗ್ಗ ಜಿಲ್ಲೆ | ಟಿ.ಎನ್. ಗಿರೀಶ್ | ಬಿ.ಇಡಿ | 8400/6250-12000 | 8600/6800-13000 | 200 |
| 17 | ಸಂಸ್ಕೃತ ಪಾಠಶಾಲೆ ಕೇಡಲಸರ, ಶಿವಮೊಗ್ಗ ಜಿಲ್ಲೆ | ಎಂ.ಎನ್. ನಾಗಭೂಷಣ | ಬಿ.ಇಡಿ | 12650/7275-13350 | 13000/8000-14800 | 350 |
| 18 | ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ ಅರಮನೆ ಹೊನ್ನಮಾಚನಹಳ್ಳಿ, ಕುಣಿಗಲ್ ತಾ॥ | ಬಿ. ಚಂದ್ರಶೇಖರ | ಬಿ.ಇಡಿ | 12650/7275-13350 | 13000/8000-14800 | 350 |
| 19 | ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ ಎಡೆಯೂರು, ಕುಣಿಗಲ್ ತಾ॥ | ಪಿ.ಎಸ್. ಹಿರೇಮಠ | ಬಿ.ಇಡಿ | 7625/6250-12000 | 7800/7275-13350 | 175 |
| 20 | ಫಿರಂಗಿಸ್ವಾಮಿ ಸಂಸ್ಕೃತ ಪಾಠಶಾಲೆ ಅಂಕನಹಳ್ಳಿಮಠ, ಕುಣಿಗಲ್ ತಾ॥ | ಸಿ.ರಾಮಯ್ಯ | ಬಿ.ಇಡಿ | 8200/6250-12000 | 8400/7275-13350 | 200 |
| 21 | ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ ಹಾಲನೂರು, ತುಮಕೂರು ತಾ॥ | ಎಸ್.ಡಿ. ರೇಣುಕಾಪ್ರಸಾದ್ | ಬಿ.ಇಡಿ | 12650/7275-13350 | 13000/8000-14800 | 350 |
| | | ಆರ್.ಎಸ್. ಗೌರಿಶಂಕರಯ್ಯ | ಬಿ.ಇಡಿ | 11100/7275-13350 | 11400/7275-13350 | 300 |
| 22 | ಮಲ್ಲೇಶ್ವರ ಸಂಸ್ಕೃತ ಪಾಠಶಾಲೆ ಕೋರಾ ತುಮಕೂರು ತಾ॥ | ಎಸ್. ನಂದೀಶಯ್ಯ | ಬಿ.ಇಡಿ | 12000/7275-13350 | 12300/7275-13350 | 300 |
| 23 | ರಾಮೇಶ್ವರ ಸಂಸ್ಕೃತ ಪಾಠಶಾಲೆ ಮುಳುಕುಂಟೆ, ತುಮಕೂರು ತಾ॥ | ಎಂ.ಎಲ್. ಮಾಲತಿ | ಬಿ.ಇಡಿ | 12000/7275-13350 | 12300/7275-13350 | 300 |
| 24 | ಶಿವಕುಮಾರಸ್ವಾಮಿ ಸಂಸ್ಕೃತ ಪಾಠಶಾಲೆ ಚೇಳೂರು, ಗುಬ್ಬಿ ತಾಲ್ಲೂಕು | ಬಿ.ಸಿ. ತಿಪ್ಪಯ್ಯ | ಬಿ.ಇಡಿ | 8400/6250-12000 | 8600/7275-13350 | 200 |
| 25 | ಕಲ್ಪತರು ಸಂಸ್ಕೃತ ಪಾಠಶಾಲೆ ಮಾಯಸಂದ್ರ, ತುರುವೇಕರೆ ತಾ॥ | ಸಿ.ಜೆ. ಶಂಕರೇಗೌಡ | ಬಿ.ಇಡಿ | 10000/7275-13350 | 10250/8000-14800 | 250 |
| 26 | ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಮಧುಗಿರಿ | ರಂಗರಾಜು | ಬಿ.ಇಡಿ | 10800/7275-13350 | 11100/8000-14800 | 300 |
| 27 | ಶ್ರೀನಿವಾಸ ಸಂಸ್ಕೃತ ಪಾಠಶಾಲೆ, ಗುಬ್ಬಿ | ಜಿ.ಎನ್. ಗಂಗಣ್ಣ | ಹಿಂದಿಶಿಕ್ಷಕ್ | 8200/6250-12000 | 8400/7275-13350 | 200 |
| 28 | ರುದ್ರೇಶ್ವರ ಸಂಸ್ಕೃತ ಪಾಠಶಾಲೆ ಹೊಸಕೆರೆ ಕುಣಿಗಲ್ ತಾ॥ | ಎನ್. ಎಸ್. ರುದ್ರಕುಮಾರ | ಬಿ.ಇಡಿ | 8200/6250-12000 | 8400/7275-13350 | 200 |
| 29 | ಮಹದೇಶ್ವರ ಸಂಸ್ಕೃತ ಪಾಠಶಾಲೆ ಕುದೂರು, ಮಾಗಡಿ ತಾ॥ | ಸಿ. ಮಹದೇವಯ್ಯ | ಬಿ.ಇಡಿ | 8400/6800-13000 | 8600/7275-13350 | 200 |
| 30 | ಕೆ.ಇ.ಸಿ.ಎಸ್. ಸಂಸ್ಕೃತ ಪಾಠಶಾಲೆ ಪಿ.ಜಿ.ಪಾಳ್ಯ, ಬೆಂಗಳೂರು | ತ್ಯಾಗರಾಜ | ಬಿ.ಇಡಿ | 6800/5800-10500 | 6950/6800-13000 | 150 |
| 31 | ಸಿದ್ದಗಂಗಾ ಸಂಸ್ಕೃತ ಪಾಠಶಾಲೆ ಬ್ಯಾಲಕೆರೆ ಮಾಗಡಿ ತಾಲ್ಲೂಕು | ಆರ್.ಹೆಚ್. ನೀಲಕಂಠಯ್ಯ | ಬಿ.ಇಡಿ | 12000/7275-13350 | 12300/8000-14800 | 300 |
| 32 | ಶಿವಕುಮಾರಸ್ವಾಮಿ ಸಂಸ್ಕೃತ ಪಾಠಶಾಲೆ ತುಮಕೂರು | ಮಹದೇವಪ್ಪ | ಬಿ.ಇಡಿ | 10800/7275-13350 | 11100/8000-14800 | 300 |
| 33 | ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪಾಠಶಾಲೆ ಚಿತ್ರದುರ್ಗ | ಬಿ.ಕೆ. ಸುಮನಾ | ಟಿ.ಸಿ.ಹೆಚ್ | 10500/7275-13350 | 10800/8000-14800 | 300 |
| 34 | ಬಾಪೂಜಿ ಸಂಸ್ಕೃತ ಪಾಠಶಾಲೆ ಶಾರದಾದೇವಿನಗರ, ತುಮಕೂರು | ಜಿ.ಸೂರ್ಯಪ್ರಕಾಶ್ | ಬಿ.ಇಡಿ | 11400/7275-13350 | 11700/8000-14800 | 300 |
| 35 | ಎಸ್.ಎ.ಎಸ್. ಸಂಸ್ಕೃತ ಪಾಠಶಾಲೆ ಮಳೂರು, ಚನ್ನಪಟ್ಟಣ ತಾ॥ | ಜಿ. ಅಪ್ರಮೇಯ ಪ್ರಸಾದ್ | ಬಿ.ಇಡಿ | 9750/6800-13000 | 10000/7275-13350 | 250 |
| 36 | ಸಂಸ್ಕೃತ ಪಾಠಶಾಲೆ ದಾರಿನಾಯಕನಪಾಳ್ಯ | ಸಿ.ಎಲ್. ಉಮಾದೇವಿ | ಹಿಂದಿಶಿಕ್ಷಕ್ | 5800/5800-10500 | 6800/6800-13000 | 1000 |
| 37 | ಸಂಸ್ಕೃತ ಪಾಠಶಾಲೆ ಹೊಸರು | ಪಿ. ಪಾರ್ವತಮ್ಮ | ಶಿಕ್ಷಾಶಾಸ್ತ್ರೀ | 10500/7275-13350 | 10800/8000-14800 | 300 |
| 38 | ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ ಚಿಕ್ಕಮಸ್ಕಲ್ ಮಾಗಡಿ ತಾ॥ | ಎಲ್. ಶಂಕರಯ್ಯ | ಹಿಂದಿಶಿಕ್ಷಕ ರ್ | 6950/5800-10500 | 7100/6800-13000 | 150 |
| 39 | ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ ಚುಂಚನಕಟ್ಟೆ, ಕೆ.ಆರ್. ನಗರ ತಾ॥ | ಎ. ಜವರೇಗೌಡ | ಬಿ.ಇಡಿ | 12650/7275-13350 | 13000/8000-14800 | 300 |
| 40 | ತೋಂಟದಾರ್ಯ ಸಂಸ್ಕೃತ ಪಾಠಶಾಲೆ ಕುದೇರುಮಠ, ಮೈಸೂರು | ಹೆಚ್. ರಾಜಶೇಖರಯ್ಯ | ಬಿ.ಇಡಿ | 12650/7275-13350 | 13000/8000-14800 | 300 |
| | | ಎಂ. ಹೊನ್ನಪ್ಪ | ಬಿ.ಇಡಿ | 11400/7275-13350 | 11700/8000-14800 | 300 |
| 41 | ಮಡಿವಾಳ ಸಂಸ್ಕೃತ ಪಾಠಶಾಲೆ ರಾಮಾನುಜ ರಸ್ತೆ, ಮೈಸೂರು | ಎಂ. ಸದಾಶಿವಯ್ಯ | ಬಿ.ಇಡಿ | 8000/6250-12000 | 8200/6800-13000 | 200 |
| 42 | ಸಂಸ್ಕೃತ ವೇದ ಪಾಠಶಾಲೆ ಬಿರೂರು, ಕಡೂರು ತಾ॥ | ಶಂಕರ ಮಂಜುನಾಥ ಹೆಬ್ಬಾರ್ | ಬಿ.ಇಡಿ | 8200/6250-12000 | 8400/6800-13000 | 200 |
| | | ಈಶ್ವರಯ್ಯ | ಬಿ.ಇಡಿ | 8200/6250-12000 | 8400/6800-13000 | 200 |
| 43 | ಎಸ್.ಪಿ.ಪಿ.ಎಸ್. ಸಂಸ್ಕೃತ ಪಾಠಶಾಲೆ ಬಂಡಳ್ಳಿ, ಕೊಳ್ಳೇಗಾಲ ತಾ॥ | ಎಂ.ಪರಶಿವಮೂರ್ತಿ | ಬಿ.ಇಡಿ | 9750/7275-13350 | 10000/8000-14800 | 250 |
| | | ಕೆಂಡಗಣ್ಣಮೂರ್ತಿ | ಬಿ.ಇಡಿ | 8400/6800-13000 | 8600/7275-13350 | 200 |
| 44 | ಸುಬ್ರಹ್ಮಣೇಶ್ವರ ಸಂಸ್ಕೃತ ಪಾಠಶಾಲೆ ಕಳಸ ಮೂಡಗೆರೆ ತಾ॥ | ಹೆಚ್.ಕೆ. ಶಿವರಾಮ | ಬಿ.ಇಡಿ | 8000/6250-12000 | 8200/6800-13000 | 200 |
| 45 | ಸಂಸ್ಕೃತ ಪಾಠಶಾಲೆ, ಸಾಲಿಗ್ರಾಮ ಕೆ.ಆರ್.ನಗರ ತಾ॥ | ಪುರುಷೋತ್ತಮ ಭಟ್ | ಬಿ.ಇಡಿ | 10800/7275-13350 | 11100/8000-14800 | 300 |

| | | | | | | |
|---|---|---|---|---|---|---|
| 46 | ಶಂಕರವಿಲಾಸ ಸಂಸ್ಕೃತ ಪಾಠಶಾಲೆ ಜಪದಕಟ್ಟೆಮಠ, ಮೈಸೂರು | ಮಧುಮತಿ ಜಿ. | ಬಿ.ಇಡಿ | 11400/7275–13350 | 11700/8000–14800 | 300 |
| | | ವಿ.ಎಸ್. ಗಣಪತಿಭಟ್ | ಬಿ.ಇಡಿ | 12650/7275–13350 | 13000/8000–14800 | 350 |
| 47 | ವಿದ್ಯಾಶಂಕರ ಸಂಸ್ಕೃತ ಪಾಠಶಾಲೆ ರುದ್ರಪಟ್ಟಣ, ಅರಕಲಗೂಡು ತಾ. | ಆರ್.ಕೆ. ರಾಜಲಕ್ಷ್ಮಮ್ಮ | ಬಿ.ಇಡಿ | 11700/7275–13350 | 12000/8000–14800 | 300 |
| 48 | ವನವಾಸಿ ರಾಮದೇವ ಟ್ರಸ್ಟ್ ಸಂಸ್ಕೃತ ಪಾಠಶಾಲೆ ಮಾಳಮಡ್ಡಿ, ಧಾರವಾಡ | ನಾಗರಾಜ ಜಿ. ಭಟ್ಟ | ಬಿ.ಇಡಿ | 8400/6800–13000 | 8600/7275–13350 | 200 |
| 49 | ಗಜಾನನ ಸಂಸ್ಕೃತ ಪಾಠಶಾಲೆ ಸೂಡಿ, ರೋಣಾ ತಾ||, | ಎನ್. ಎಸ್. ಕುಲಕರ್ಣಿ | ಬಿ.ಇಡಿ | 8600/7275–13350 | 8825/8000–14800 | 225 |
| 50 | ರಾಘವೇಂದ್ರ ಸಂಸ್ಕೃತ ಪಾಠಶಾಲೆ ಸಾಧನಕೇರಿ, ಧಾರವಾಡ | ಎಸ್.ಜಿ. ಘಟ್ನಟ್ಟಿ | ಬಿ.ಇಡಿ | 10500/7275–13350 | 10800/8000–14800 | 300 |
| 51 | ಜಗದ್ಗುರು ಗಂಗಾಧರ ಸಂಸ್ಕೃತ ಪಾಠಶಾಲೆ ಮೂರುಸಾವಿರಮಠ, ಹುಬ್ಬಳ್ಳಿ | ಎಸ್.ಐ. ಮಠದ್ | ಬಿ.ಇಡಿ | 10500/7275–13350 | 10800/8000–14800 | 300 |
| 52 | ಬಸವೇಶ್ವರ ಸಂಸ್ಕೃತ ಪಾಠಶಾಲೆ ಅಮೀನಗಡ, ಹುನಗುಂದ ತಾ|| | ಬಿ.ಎಸ್. ಬಾಸೂರ | ಬಿ.ಇಡಿ | 12650/7275–13350 | 13000/8000–14800 | 350 |
| 53 | ಗುರುಕುಲ ಸಂಸ್ಕೃತ ಪಾಠಶಾಲೆ ಮಹೇಂದ್ರಕರಚಾಳ, ಧಾರವಾಡ | ಬಿ.ಎ. ಅಶೆಟ್ಟಿ | ಬಿ.ಇಡಿ | 8000/6250–12000 | 8200/6800–13000 | 200 |
| | | ಎಸ್.ವಿ. ವಸ್ತ್ರದ | ಬಿ.ಇಡಿ | 8200/6250–12000 | 8400/6800–13000 | 200 |
| 54 | ನೀಲಕಂಠೇಶ್ವರ ಸಂಸ್ಕೃತ ಪಾಠಶಾಲೆ ರಾಮಪೂರ, ಜಮಖಂಡಿ ತಾ||, | ಎಂ.ಎಂ. ಹೊಸಮನಿ | ಬಿ.ಇಡಿ | 12650/7275–13350 | 13000/8000–14800 | 350 |
| 55 | ಭಾರತಿ ಸಂಸ್ಕೃತ ಪಾಠಶಾಲೆ ಭೈರುಂಬೆ, ಶಿರಸಿ ತಾ|| | ಕೃಷ್ಣಮೂರ್ತಿ ಹೆಗಡೆ | ಬಿ.ಇಡಿ | 5800/5800–10500 | 6800/6800–13000 | 1000 |
| 56 | ಎಸ್.ಎಸ್.ಟಿ. ಸಂಸ್ಕೃತ ಪಾಠಶಾಲೆ ಹಿರೇಕೆರೂರು, ಹಾವೇರಿ ಜಿಲ್ಲೆ | ಎಸ್.ಆರ್. ಪಿಳಗಿಮಠ | ಬಿ.ಇಡಿ | 9750/7275–13350 | 10000/8000–14800 | 250 |
| 57 | ಭುವನೇಶ್ವರ ಸಂಸ್ಕೃತ ಪಾಠಶಾಲೆ ಹುನ್ನೂರ, ಜಮಖಂಡಿ ತಾ|| | ಎಸ್. ಎಲ್. ಕಳಸಣ್ಣ | ಬಿ.ಇಡಿ | 10800/7275–13350 | 11100/8000–14800 | 300 |
| 58 | ಗಾಂಧೀ ಸಂಸ್ಕೃತ ಪಾಠಶಾಲೆ ಕುಂದಗೋಳ, ಧಾರವಾಡ ಜಿಲ್ಲೆ | ಎಸ್.ಪಿ. ಬಾಳಿಹಳ್ಳಿಮಠ | ಬಿ.ಇಡಿ | 10800/7275–13350 | 11100/8000–14800 | 300 |
| | | ಎ.ಎನ್. ಕುಲಕರ್ಣಿ | ಬಿ.ಇಡಿ | 6800/5800–10500 | 6950/6800–13000 | 150 |
| 59 | ಎಂ.ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ ಗಜೇಂದ್ರಗಡ, ರೋಣ ತಾ | ಐ. ವಿ. ಮಾಳೆಕೊಪ್ಪ | ಬಿ.ಇಡಿ | 12650/7275–13350 | 13000/8000–14800 | 350 |
| | | ಐ.ವಿ. ಮಾರನಬಸರಿ | ಬಿ.ಇಡಿ | 9500/7275–13350 | 9750/8000–14800 | 250 |
| 60 | ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ ಶಿವಬಸವನಗರ, ಬೆಳಗಾವಿ | ಜಯಶ್ರೀ ಆರ್. ಕೇಳ್ಕರ್ | ಬಿ.ಇಡಿ | 12650/7275–13350 | 13000/8000–14800 | 350 |
| 61 | ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ ಲಕ್ಷ್ಮೇಶ್ವರ, ಗದಗ | ಬಿ.ಹೆಚ್. ಸಂಗೂರಮಠ | ಬಿ.ಇಡಿ | 12650/7275–13350 | 13000/8000–14800 | 350 |
| 62 | ಸೀತಾರಾಮಾಂಜನೇಯ ಸಂಸ್ಕೃತ ಪಾಠಶಾಲೆ, ಬಿಸಗೋಡ , ಯಲ್ಲಾಪುರ | ವಿಘ್ನೇಶ್ವರ ಎಂ. ಭಟ್ಟ | ಬಿ.ಇಡಿ | 12650/7275–13350 | 13000/8000–14800 | 350 |
| 63 | ಸಿದ್ದಿವಿನಾಯಕ ಸಂಸ್ಕೃತ ಪಾಠಶಾಲೆ ಇಡಗುಂಜಿ, ಹೊನ್ನಾವರ ತಾ|| | ಸುಬ್ರಾಯ ನಾಗೇಶ ಭಟ್ಟ | ಬಿ.ಇಡಿ | 10800/7275–13350 | 11100/8000–14800 | 300 |
| 64 | ಸಿದ್ದಿವಿನಾಯಕ ಸಂಸ್ಕೃತ ಪಾಠಶಾಲೆ ಹಾಳದಕಟ್ಟಾ, ಸಿದ್ಧಾಪುರ ತಾ|| | ನಾರಾಯಣ ವೇ. ಭಟ್ಟ | ಬಿ.ಇಡಿ | 8200/6250–12000 | 8400/7275–13350 | 200 |
| 65 | ಜಗದ್ಗುರು ಅನ್ನದಾನೀಶ್ವರ ಸಂಸ್ಕೃತ ಪಾಠಶಾಲೆ, ಮುಂಡರಗಿ, ಗದಗ ಜಿಲ್ಲೆ | ಎಸ್.ಬಿ. ಹಿರೇಮಠ | ಬಿ.ಇಡಿ | 12650/7275–13350 | 13000/8000–14800 | 350 |
| 66 | ಜಗದ್ಗುರು ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಗದಗ | ಎಂ.ಎಸ್. ಅಂಗಡಿ | ಬಿ.ಇಡಿ | 12000/7275–13350 | 12300/8000–14800 | 300 |
| | | ಎಸ್.ಎಸ್. ನೀಲಗುಂದ | ಟಿ.ಸಿ.ಹೆಚ್. | 9275/7275–13350 | 9500/8000–14800 | 225 |
| 67 | ಮಹಾಂತೇಶ್ವರ ಸಂಸ್ಕೃತ ಪಾಠಶಾಲೆ, ಹತ್ತಿಮತ್ತೂರು, ಸವಣೂರು ತಾ|| | ಎಸ್.ಸಿ. ಕತ್ತಿಕೈ | ಟಿ.ಸಿ.ಹೆಚ್. | 12650/7275–13350 | 13000/8000–14800 | 350 |
| 68 | ಉಜ್ಜಯಿನಿ ಜಗದ್ಗುರು ಸಂಸ್ಕೃತ ಪಾಠಶಾಲೆ, ಬಂಡಿಮೇಟ, ಬಳ್ಳಾರಿ | ಚಂದ್ರಶೇಖರಯ್ಯ ಹಿರೇಮಠ | ಬಿ.ಇಡಿ | 10500/7275–13350 | 10800/8000–14800 | 300 |
| 69 | ಹಿರೇಮಠ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ ಕೂಡ್ಲಗಿ, ಬಳ್ಳಾರಿ ಜಿಲ್ಲೆ | ವಿ.ಜಿ. ದೇಶಪಾಂಡೆ | ಬಿ.ಇಡಿ | 11100/7275–13350 | 10400/8000–14800 | 300 |
| 70 | ಜ್ಞಾನಗಂಗಾ ಸಂಸ್ಕೃತ ಪಾಠಶಾಲೆ ವಿಠಲಮಂದಿರ, ಗುಲ್ಬರ್ಗಾ | ಸುವರ್ಣಲತಾ ಕೆ. ಪುರೋಹಿತ | ಬಿ.ಇಡಿ | 10500/7275–13350 | 10800/8000–14800 | 300 |
| 71 | ಗಣೇಶ ಜ್ಯೋತಿಷ್ಯ ಸಂಸ್ಕೃತ ಪಾಠಶಾಲೆ ಕೃಷ್ಣಮೂರ್ತಿಪುರಂ, ಮೈಸೂರು | ನರಸಿಂಹಭಟ್ಟ | ಬಿ.ಇಡಿ | 10500/7275–13350 | 10800/8000–14800 | 300 |
| 72 | ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಮತ್ತಿಘಟ್ಟ, ಚಿಕ್ಕನಾಯಕನಹಳ್ಳಿ ತಾಲ್ಲೂಕು ತುಮಕೂರು ಜಿಲ್ಲೆ | ಎಂ. ರಾಜಶೇಖರಪ್ಪ | ಬಿ.ಇಡಿ | 12650/7275–13350 | 13000/8000–14800 | 350 |
| | | | | | ಒಟ್ಟು ಮೊತ್ತ | 25375 |

ನಿರ್ಣಯ: **ಸಭೆಯು ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿತು. ಒಟ್ಟು 72 ಸಹಶಿಕ್ಷಕರು ತರಬೇತಿ ಪಡೆದ ವಿವರಗಳನ್ನು ಚರ್ಚಿಸಿತು. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಪೂರ್ವೋಕ್ತ ಅನುದಾನ ಸಂಹಿತೆಗೆ ಅನುಗುಣವಾಗಿ ಅವರಿಗೆ ತರಬೇತಿ ವೇತನ ನೀಡಲು ಸಭೆಯು ಅನುಮೋದಿಸಿತು.**

**ವಿಷಯ 8: ನಿಯೋಜನೆ ಮೇರೆಗೆ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಲ್ಲಿ ರಜಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಗಳಿಕೆ ರಜೆ ಮಂಜೂರಾತಿ ಬಗೆಗೆ.**

ಟಿಪ್ಪಣಿ: ನಿಯೋಜನೆ ಮೇರೆಗೆ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಲ್ಲಿ ರಜಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ **ಕೆಸಿಎಸ್‌ಆರ್ ನಿಯಮ 113 ಉಪನಿಯಮ 3(ಎ)**ರಲ್ಲಿ ತಿಳಿಸಿರುವಂತೆ ರಜಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಗಳಿಕೆ ರಜೆಯನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಮಂಜೂರಾತಿಗಾಗಿ ಸಭೆಯ ಮುಂದೆ ಇರಿಸಿದೆ.

**ಪಾಠಶಾಲಾ ವಿಭಾಗ**

1. **ವಿದ್ವಾನ್ ಎಂ.ಸಿ. ಭೋಜಯ್ಯ,** ಸಹಶಿಕ್ಷಕರು, ಶ್ರೀ ಉರಿಗದ್ದಿಗೇಶ್ವರ ಸಂಸ್ಕೃತ ಪಾಠಶಾಲೆ, ಬೆಟ್ಟಹಳ್ಳಿಮಠ, ಕುಣಿಗಲ್ ತಾ., ತುಮಕೂರು ಜಿಲ್ಲೆ
2. **ವಿದ್ವಾನ್ ಟಿ.ಸಿ. ಅಶ್ವತ್ಥಕುಮಾರ್,** ಮುಖ್ಯಶಿಕ್ಷಕರು, ಮನೋನ್ಮನೀ ಸಂಸ್ಕೃತ ಪಾಠಶಾಲೆ, ಬಸವನಗುಡಿ, ಬೆಂಗಳೂರು
3. **ವಿದ್ವಾನ್ ಎನ್. ಇಂದೇಶಪ್ಪ,** ಮುಖ್ಯಶಿಕ್ಷಕರು, ಗುರುಮಲ್ಲೇಶ್ವರ ಸಂಸ್ಕೃತ ಪಾಠಶಾಲೆ, ದೇವನೂರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ
4. **ಎಸ್.ಆರ್. ರುದ್ರಾರಾಧ್ಯ,** ಸಹಶಿಕ್ಷಕರು, ವಿದ್ಯಾನಿವೇದಿತಾ ಸಂಸ್ಕೃತ ಪಾಠಶಾಲೆ, ಮಂಜುನಾಥನಗರ, ಬೆಂಗಳೂರು
5. **ತ್ಯಾಗರಾಜ,** ಸಹಶಿಕ್ಷಕರು, ಕರ್ನಾಟಕ ವಿದ್ಯಾ ಮತ್ತು ಸಾಂಸ್ಕೃತಿಕ ಸಂಘ ಸಂಸ್ಕೃತ ಪಾಠಶಾಲೆ, ಪಿ.ಜಿ.ಹಳ್ಳಿ, ಮಲ್ಲೇಶ್ವರಂ, ಬೆಂಗಳೂರು

**ಕಾಲೇಜು ವಿಭಾಗ**

1. **ವಿದ್ವಾನ್ ಎಸ್. ದಯಾಶಂಕರ್,** ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು.
2. **ವಿದ್ವಾನ್ ಎಚ್.ಬಿ. ರಾಮೇಗೌಡ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು.
3. **ವಿದ್ವಾನ್ ಹನುಮಂತಯ್ಯ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು.

ನಿರ್ಣಯ: **ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಾಠಶಾಲೆ ಮತ್ತು ಕಾಲೇಜು ವಿಭಾಗಗಳ ಸಹಶಿಕ್ಷಕರು ಮತ್ತು ಪ್ರಾಧ್ಯಾಪಕರುಗಳಿಗೆ ಅವರವರು ನಿಯೋಜನೆ ಹೊಂದಿದ ದಿನಾಂಕದಿಂದ ಗಳಿಕೆರಜೆಯನ್ನು ಮಂಜೂರು ಮಾಡಬಹುದೆಂದು ಸಭೆಯು ಒಪ್ಪಿಗೆಯನ್ನು ನೀಡಿತು.**

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:

**ವಿಷಯ 1: ದಿನಾಂಕ: 14.05.2012ರಂದು ನಡೆದ 'ಹಣಕಾಸು ಸಮಿತಿ' ಸಭೆ ನಡಾವಳಿಯ ಅನುಮೋದನೆ ಬಗೆಗೆ.**

ಟಿಪ್ಪಣಿ: ದಿನಾಂಕ: 14.05.2012ರ ಸೋಮವಾರ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ 'ಹಣಕಾಸು ಸಮಿತಿ'ಯ 4ನೆಯ ಸಭೆಯು (ಬಹುಮಹಡಿ ಕಟ್ಟಡದ ಎರಡನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 252ರಲ್ಲಿ) ನಡೆಯಿತು. ಈ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 2: ದಿನಾಂಕ: 19.03.2012ರಂದು ನಡೆದ 'ಖರೀದಿ ಸಮಿತಿ' ಸಭೆ ನಡಾವಳಿಯ ಅನುಮೋದನೆ ಬಗೆಗೆ.**

ಟಿಪ್ಪಣಿ: ದಿನಾಂಕ: 19.03.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **'ಖರೀದಿ ಸಮಿತಿ'**ಯ ಮೊದಲನೆಯ ಸಭೆಯು ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯ ನಡಾವಳಿಯನ್ನು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 3: ಡಾ. ಎಂ.ಕೆ. ಶ್ರೀಧರ್ ಅವರು ಪ್ರಸಾರಾಂಗದ ಉಪನಿರ್ದೇಶಕರಾಗಿ ಕಾರ್ಯನಿರ್ವಹಣೆ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಡಾ. ಎಂ.ಕೆ. ಶ್ರೀಧರ್, ಸಂಸ್ಕೃತ ಉಪಪ್ರಾಧ್ಯಾಪಕರು, ನ್ಯಾಷನಲ್ ಪದವಿ ಕಾಲೇಜು, ಬಸವನಗುಡಿ, ಬೆಂಗಳೂರು – ಇವರನ್ನು ಸರ್ಕಾರದ ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 189 ಯುಪಿಸಿ 2011, ದಿನಾಂಕ: 07.01.2012ರ ನಿರ್ದೇಶನದಂತೆ ಅನ್ಯಕಾರ್ಯನಿಮಿತ್ತ ಎರಡು ವರ್ಷಗಳ ಅವಧಿಗೆ ಕಾರ್ಯನಿರ್ವಹಿಸಲು ಆದೇಶಿಸಿದೆ. ಇದರನ್ವಯ ಮಾನ್ಯರು ತಮ್ಮ ಮೂಲ ಹುದ್ದೆಯಿಂದ ಬಿಡುಗಡೆಗೊಂಡು ವಿಶ್ವವಿದ್ಯಾಲಯಕ್ಕೆ ದಿನಾಂಕ: 05.03.2012ರ ಅಪರಾಹ್ನ ವರದಿ ಮಾಡಿಕೊಂಡಿದ್ದು, ಇವರನ್ನು ಪ್ರಸಾರಾಂಗದ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಡಾ. ಎಂ.ಕೆ. ಶ್ರೀಧರ್ ಅವರ ನಿಯೋಜನೆ ಮತ್ತು ಕಾರ್ಯಭಾರವನ್ನು ಪರಿಶೀಲಿಸಿ ಘಟನೋತ್ತರ ಒಪ್ಪಿಗೆಯನ್ನು ನೀಡಿತು.**

**ವಿಷಯ 4: ಶ್ರೀ ಸತ್ಯನಾರಾಯಣ ಇವರನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪತ್ರಾಂಕಿತ ವ್ಯವಸ್ಥಾಪಕ ಹುದ್ದೆಗೆ ನಿಯೋಜಿಸಿರುವ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಶ್ರೀ ಸತ್ಯನಾರಾಯಣ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಪುತ್ತೂರು –ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು –ಇವರ ಕಾರ್ಯಾಲಯದ ಪತ್ರ ಸಂಖ್ಯೆ ಇಡಿ 34 ಡಿಎಆರ್ 2012, ದಿನಾಂಕ: 16.04.2012ರ ಪತ್ರದಲ್ಲಿ ಇವರ ಸೇವೆಯನ್ನು

ಉನ್ನತ ಶಿಕ್ಷಣ ಇಲಾಖೆಯ ವಶಕ್ಕೆ ನೀಡಿದ್ದು, ಇವರು ಉನ್ನತ ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಇಡಿ 128 ಯುಆರ್‌ಸಿ 2012, ದಿನಾಂಕ: 27.04.2012ರ ಅನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕೋರಿದ ಹುದ್ದೆಗೆ ಎದುರಾಗಿ ಮೂಲ ಹುದ್ದೆಯಿಂದ ಬಿಡುಗಡೆಗೊಂಡು ದಿನಾಂಕ: 03.05.2012ರ ಪೂರ್ವಾಹ್ನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಾಲಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಇವರನ್ನು ಸಂಸ್ಕೃತ ಶಿಕ್ಷಣ ನಿರ್ದೇನಶಾಲಯದ ನಿರ್ದೇಶಕರ ಪತ್ರಾಂಕಿತ ವ್ಯವಸ್ಥಾಪಕ ಹುದ್ದೆಗೆ ನಿಯೋಜಿಸಿ ಆದೇಶಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಶ್ರೀ ಸತ್ಯನಾರಾಯಣ ಅವರ ನಿಯೋಜನೆ ಮತ್ತು ಕಾರ್ಯಭಾರವನ್ನು ಪರಿಶೀಲಿಸಿ ಘಟನೋತ್ತರ ಒಪ್ಪಿಗೆಯನ್ನು ನೀಡಿತು.**

**ವಿಷಯ 5: ಗುರುಕುಲ ಶಿಕ್ಷಣ ಟ್ರಸ್ಟ್‌ನ ಕಾಲೇಜು ಮತ್ತು ಪಾಠಶಾಲೆಗಳಿಗೆ ಆಡಳಿತಾಧಿಕಾರಿ ನೇಮಕದ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಗುರುಕುಲ ಶಿಕ್ಷಣ ಟ್ರಸ್ಟ್ ಆಡಳಿತ ಮಂಡಳಿ ಮತ್ತು ಕಾಲೇಜಿನ ಸಿಬ್ಬಂದಿ ವರ್ಗದವರ ನಡುವೆ ಸಾಮರಸ್ಯ ಇಲ್ಲದಿರುವುದು, ಅವರುಗಳು ಮಾಡುತ್ತಿರುವ ಆರೋಪ–ಪ್ರತ್ಯಾರೋಪಗಳು ವಿಶ್ವವಿದ್ಯಾಲಯಕ್ಕೆ ಪದೇಪದೆ ಬರುತ್ತಿರುವುದರಿಂದ ಗುರುಕುಲ ಶಿಕ್ಷಣ ಟ್ರಸ್ಟ್ ನಡೆಸುತ್ತಿರುವ ಕಾಲೇಜು ಮತ್ತು ಪಾಠಶಾಲೆಗಳು ಸುಸೂತ್ರವಾಗಿ ನಡೆದು ಸಂಸ್ಕೃತವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆಯೂ ಆರ್ಥಿಕ ಅಪವ್ಯಯಗಳು ಉಂಟಾಗದಿರುವಂತೆಯೂ ಗಮನ ಕೊಡಬೇಕಾಗಿದೆಯೆಂದು, ಈ ಸಂಬಂಧವಾಗಿ ಆಡಳಿತಾಧಿಕಾರಿಯೊಬ್ಬರನ್ನು ನೇಮಿಸುವುದು ಉಚಿತವೆಂದು ಅಭಿಪ್ರಾಯಪಡಲಾಗಿತ್ತು. ಈ ಎಲ್ಲಾ ವಿವರಗಳನ್ನು ಪರಾಮರ್ಶಿಸಿದ ಕರ್ನಾಟಕ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿದ ಹಿನ್ನೆಲೆಯಲ್ಲಿ ಭಾಷಾ ನಿಕಾಯದ ಡೀನ್ ಪ್ರೊ. ಶ್ರೀನಿವಾಸ ವರಖೇಡಿ ಅವರನ್ನು ಗುರುಕುಲ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿಯಾಗಿ ಪತ್ರಸಂಖ್ಯೆ: ಕಸಂವಿ/17(1)/2011–12; ದಿನಾಂಕ: 20.03.2012 ಅನ್ವಯ ನೇಮಿಸಲಾಗಿದೆ. ಅಲ್ಲದೇ, ಗುರುಕುಲ ಶಿಕ್ಷಣ ಟ್ರಸ್ಟ್ ಅಡಿಯಲ್ಲಿ ಬರುವ ಸಂಸ್ಕೃತ ಕಾಲೇಜು ಮತ್ತು ಪಾಠಶಾಲೆಗಳು ಸುಗಮವಾಗಿ ನಡೆಯಲು ಪ್ರೊ. ಜಯತೀರ್ಥಾಚಾರ್ಯ ಮಳಗಿ ಅವರ ಅಧ್ಯಕ್ಷತೆಯ **'ಗುರುಕುಲ ಶಿಕ್ಷಣ ಟ್ರಸ್ಟ್ ಕಾಲೇಜು ಮತ್ತು ಪಾಠಶಾಲೆಗಳ ಅಭಿವೃದ್ಧಿ ಸಮಿತಿ'**ಯನ್ನು ರಚಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. ಈಗಾಗಲೇ ಎರಡು ಸಭೆಗಳನ್ನು ನಡೆಸಿ ಕಾಲೇಜು ಮತ್ತು ಪಾಠಶಾಲೆಗಳ ನಿರ್ವಹಣೆ ವ್ಯವಸ್ಥಿತವಾಗಿ ನಡೆಯುವಂತೆ ಕ್ರಮ ಕೈಗೊಳ್ಳಲಾಗಿದೆ. ಈ ಎಲ್ಲಾ ವಿಚಾರಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸರ್ಕಾರದ ಆದೇಶವನ್ನು ಪರಿಶೀಲಿಸಿತು. ಗುರುಕುಲ ಶಿಕ್ಷಣ ಟ್ರಸ್ಟ್, ಧಾರವಾಡ –ಇದಕ್ಕೆ ಆಡಳಿತಾಧಿಕಾರಿಗಳಾಗಿ ಭಾಷಾ ನಿಕಾಯದ ಡೀನ್ ಅವರನ್ನು ನೇಮಿಸಿರುವ ಬಗೆಗೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 6: ಸಿ.ಎಲ್.ವೈ. ಸಂಸ್ಕೃತ ಕಾಲೇಜಿನ ಜ್ಯೇಷ್ಠತಾಪಟ್ಟಿಯನ್ನು ಅಂತಿಮಗೊಳಿಸಿ, ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ ಅವರನ್ನು ಪ್ರಾಚಾರ್ಯರನ್ನಾಗಿ ನೇಮಕ ಮಾಡಿರುವ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ಧಾರವಾಡದ ಗುರುಕುಲ ಶಿಕ್ಷಣ ಟ್ರಸ್ಟ್‌ನ ಅಡಿಯಲ್ಲಿ ನಡೆಯುತ್ತಿರುವ ಸಿ.ಎಲ್.ವೈ. ಸಂಸ್ಕೃತ ಕಾಲೇಜಿನ ಪ್ರಾಚಾರ್ಯರನ್ನು ನೇಮಿಸುವ ಸಲುವಾಗಿ ಬೋಧಕ ವರ್ಗದವರ ತತ್ಕಾಲಿಕ ಜ್ಯೇಷ್ಠತಾಪಟ್ಟಿಯನ್ನು ಸಿದ್ಧಪಡಿಸಿ, ನಿಯಮಾನುಸಾರ ಆಕ್ಷೇಪಣೆಗಳನ್ನು ಕರೆಯಲಾಗಿತ್ತು. ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದ ಕಾರಣ ಸಿಬ್ಬಂದಿ ವರ್ಗದವರ ಜ್ಯೇಷ್ಠತಾಪಟ್ಟಿಯನ್ನು ಅಂತಿಮಗೊಳಿಸಿ, ಜ್ಯೇಷ್ಠತೆಯಲ್ಲಿ ಹಿರಿಯ ಪ್ರಾಧ್ಯಾಪಕರಾದ ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ (ಎಸ್.ಎನ್. ಇನಾಮದಾರ) –ಇವರನ್ನು ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಸಂವಿ/ಬೆಂ/17/ಸಿ.ಎಲ್.ವೈ/2012–13; ದಿನಾಂಕ 23.04.2012ರಲ್ಲಿ ಪ್ರಾಚಾರ್ಯರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಪ್ರಾಚಾರ್ಯರ ಹುದ್ದೆಗೆ ಅನುಗುಣವಾಗಿ ಇವರ ವೇತನಶ್ರೇಣಿಯನ್ನು 36300/– ರಿಂದ 53850/– ಗಳಿಗೆ ಒಳಪಡಿಸಬೇಕಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸಿ.ಎಲ್.ವೈ. ಕಾಲೇಜಿನ ಪ್ರಾಚಾರ್ಯರನ್ನಾಗಿ ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ ಅವರನ್ನು ನೇಮಕ ಮಾಡಿರುವುದರ ಬಗೆಗೆ ಪರಿಶೀಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 7: 2012–13ನೇ ಸಾಲಿನಲ್ಲಿ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸುವುದರ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: 2012–13ನೇ ಸಾಲಿನಲ್ಲಿ ಸಂಸ್ಕೃತ ಕಾಲೇಜುಗಳನ್ನು ಪ್ರಾರಂಭಿಸಲು ರಾಜ್ಯದ ಹಲವು ಸಂಸ್ಥೆಗಳಿಂದ ಆವೇದನಪತ್ರಗಳು ಬಂದ ಕಾರಣ, ಅವುಗಳನ್ನು ಪರಿಶೀಲಿಸಿ ಅನುಮತಿ ಕೊಡುವ ನಿಮಿತ್ತ ಈ ಕೆಳಕಂಡಂತೆ ತ್ರಿಸದಸ್ಯ ಸಮಿತಿಗಳನ್ನು ನೇಮಿಸಲಾಗಿತ್ತು. ಅವುಗಳ ವರದಿಯನ್ವಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

| ಕ್ರ ಸಂ. | ಸಂಸ್ಥೆಗಳ ವಿಳಾಸ | ಅನುಮತಿ ನೀಡಿರುವ ಶಾಸ್ತ್ರಭಾಗಗಳು | ಸಮಿತಿ ಸದಸ್ಯರ ಹೆಸರು ಮತ್ತು ಭೇಟಿ ದಿನಾಂಕ |
|---|---|---|---|
| 01 | **ಶ್ರೀ ಸ್ವಾಮಿನಾರಾಯಣ ಗುರುಕುಲ ಇಂಟರ್‌ನ್ಯಾಷನಲ್ ಸ್ಕೂಲ್,** ಗುಲಬರ್ಗಾ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ–I | **22.08.2011**<br>ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ<br>ಡಾ. ಮೈಖೇಲ್<br>ಡಾ. ಶ್ರೀನಿವಾಸ ವರಖೇಡಿ |

| | | | |
|---|---|---|---|
| 02 | **ಶ್ರೀ ಜಗದ್ಗುರು ಗುರುಬಸವೇಶ್ವರ ವಿದ್ಯಾಪೀಠ(ರಿ)**<br>ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ-I | **26.04.2012**<br>ವಿದ್ವಾನ್ ವಿ.ಜಿ. ಹೆಗಡೆ<br>ವಿದ್ವಾನ್ ಎಂ.ಸಿ.ಚರಂತಿಮಠ<br>ವಿದ್ವಾನ್ ಎಸ್. ದಯಾಶಂಕರ |
| 03 | **ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ(ರಿ)**<br>ಶ್ರೀ ದೇಗುಲಮಠ, ಕನಕಪುರ-562117 ರಾಮನಗರ ಜಿಲ್ಲೆ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I<br>2. ಶಕ್ತಿವಿಶಿಷ್ಟಾದ್ವೈತವೇದಾಂತ ವಿದ್ವನ್ಮಧ್ಯಮಾ- I | **16.04.2012**<br>ಪ್ರೊ. ಎನ್. ಅಶ್ವತ್ಥಮ್ಮ<br>ಪ್ರೊ. ಸಿ. ನಂಜುಂಡಯ್ಯ<br>ವಿದ್ವಾನ್ ಎಸ್. ದಯಾಶಂಕರ |
| 04 | **ಶ್ರೀ ರುದ್ರೇಶ್ವರ ಸಂಸ್ಕೃತ ಪಾಠಶಾಲಾ ಟ್ರಸ್ಟ್(ರಿ)**<br>ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I | **19.04.2012**<br>ಡಾ. ಟಿ.ಎಸ್. ಸತ್ಯವತಿ<br>ಶ್ರೀ ಜಿ. ಹನುಮಂತರಾಯಪ್ಪ<br>ವಿದ್ವಾನ್ ಹನುಮಂತಯ್ಯ |
| 05 | **ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲಾ**<br>ಶ್ರೀ ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ, ಖಿಲ್ಲೆಮೊಹಲ್ಲಾ, ಮೈಸೂರು-570004. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ-I | **11.04.2012**<br>ಪ್ರೊ. ಎನ್. ಅಶ್ವತ್ಥಮ್ಮ<br>ಪ್ರೊ. ಸಿ. ನಂಜುಂಡಯ್ಯ<br>ವಿದ್ವಾನ್ ಎಸ್. ದಯಾಶಂಕರ |
| 06 | **ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ(ರಿ)**<br>ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೆಹೊನ್ನೂರು-577112, ಚಿಕ್ಕಮಗಳೂರು ಜಿಲ್ಲೆ | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ-I | **16.04.2012**<br>ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು<br>ಡಾ. ಬಿ.ಎಸ್.ಮಹದೇವಯ್ಯ<br>ವಿದ್ವಾನ್ ಹೆಚ್.ಬಿ.ರಾಮೇಗೌಡ |
| 07 | **ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ವಿದ್ಯಾವರ್ಧಕ ಸಂಘ(ರಿ)**<br>ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ<br>ದೂರವಾಣಿ: 08188-252947 | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ-I | **27.04.2012**<br>ವಿದ್ವಾನ್ ವಿ.ಜಿ. ಹೆಗಡೆ<br>ವಿದ್ವಾನ್ ಎಂ.ಸಿ. ಚರಂತಿಮಠ<br>ವಿದ್ವಾನ್ ಎಸ್. ದಯಾಶಂಕರ |
| 08. | **ಶ್ರೀ ಕಾಲಭೈರವೇಶ್ವರ ಕಲ್ಪತರು ಆಶ್ರಮ**<br>ಮಾಯಸಂದ್ರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I | **24.03.2012**<br>**ಪ್ರೊ. ಸಿ. ನಂಜುಂಡಯ್ಯ**<br>**ವಿದ್ವಾನ್ ಸಿ. ಅಶ್ವತ್ಥಪ್ಪ**<br>**ವಿದ್ವಾನ್ ಎಚ್.ಬಿ. ರಾಮೇಗೌಡ** |
| 09. | **ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ(ರಿ)**<br>ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ<br>ದೂರವಾಣಿ- 080-7722114, 7726247 | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ- I | **19.04.2012**<br>ಡಾ. ಟಿ.ಎಸ್. ಸತ್ಯವತಿ<br>ಶ್ರೀ ಜಿ. ಹನುಮಂತರಾಯಪ್ಪ<br>ವಿದ್ವಾನ್ ಹನುಮಂತಯ್ಯ |
| 10. | **ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಮಹಾಪಾಠಶಾಲಾ**<br>ಎನ್.ಎಸ್.ಆರ್.ಎಸ್. ಮಠ, ಜವಾಹರನಗರ, ರಾಯಚೂರು.<br>ದೂರವಾಣಿ: 08532-214047 | 1. ನವೀನನ್ಯಾಯ ವಿದ್ವನ್ಮಧ್ಯಮಾ- I<br>2. ದ್ವೈತವೇದಾಂತ ವಿದ್ವನ್ಮಧ್ಯಮಾ- I | ಪ್ರೊ. ಜಯತೀರ್ಥಾಚಾರ್ಯ ಮಳಗಿ<br>ವಿದ್ವಾನ್ ಡಿ.ಎಸ್.ಚಂದ್ರಶೇಖರಯ್ಯ<br>ಡಾ. ಶ್ರೀನಿವಾಸ ವರಖೇಡಿ |

2012-13ನೇ ಸಾಲಿನಲ್ಲಿ ಹೊಸದಾಗಿ ಸಂಸ್ಕೃತ ಕಾಲೇಜುಗಳನ್ನು ಆರಂಭಿಸಲು ಮೇಲಿನ ಸಂಸ್ಥೆಗಳಿಗೆ ಅನುಮತಿ ನೀಡಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 2012-13ನೇ ಸಾಲಿನಲ್ಲಿ ಹೊಸದಾಗಿ ಕಾಲೇಜುಗಳ ಸ್ಥಾಪನೆಗೆ ಘಟನೋತ್ತರ ಅನುಮೋದನೆಯನ್ನು ನೀಡಿತು. ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಮಹಾಪಾಠಶಾಲಾ, ರಾಯಚೂರು ಈ ಸಂಸ್ಥೆಗೆ ತ್ರಿಸದಸ್ಯರ ಸಮಿತಿಯು ಭೇಟಿ ನೀಡಿ, ವರದಿ ನೀಡಿದ ನಂತರ ಕಾಲೇಜನ್ನು ಪ್ರಾರಂಭಿಸುವುದರ ಬಗೆಗೆ ಮಾನ್ಯ ಕುಲಪತಿಗಳು ಸೂಕ್ತ ಕ್ರಮವಹಿಸಬಹುದೆಂದು ಸಭೆಯು ನಿರ್ಣಯಿಸಿತು.**

**ವಿಷಯ 8: ಡಾ. ಎಚ್.ಕೆ. ಸುರೇಶ, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಕಾಲೇಜು, ಉಡುಪಿ -ಇವರ ವೇತನಶ್ರೇಣಿ ನಿಗದೀಕರಣ ಮಾಡುವ ಬಗೆಗೆ.**

ಟಿಪ್ಪಣಿ: ಡಾ. ಹೆಚ್.ಕೆ. ಸುರೇಶ, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸ್ನಾತಕ-ಸ್ನಾತಕೋತ್ತರ ಅಧ್ಯಯನ ಕೇಂದ್ರ, ಉಡುಪಿ - 576101 ಇವರ ವೇತನ ಶ್ರೇಣಿಯಲ್ಲಾದ ವ್ಯತ್ಯಾಸವನ್ನು ಸರಿಪಡಿಸಲು ಕೋರಿದ್ದು, ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಇಡಿ/62/ಎಲ್.ಎಸ್.ಇ/2007, ಬೆಂಗಳೂರು, ದಿನಾಂಕ 10.01.2008 ಇದರಂತೆ ಈಗಾಗಲೇ ತಪ್ಪಾಗಿ ನಿಗದಿಯಾದ ಕೆಲ ಕಾಲೇಜುಗಳ ಪ್ರಾಚಾರ್ಯರುಗಳ ವೇತನ ಶ್ರೇಣಿಯನ್ನು ಸರಿಮಾಡಿ ನಿಗದಿಪಡಿಸಲಾಗಿದ್ದು, ಅದೇ ರೀತಿ ಡಾ. ಹೆಚ್.ಕೆ. ಸುರೇಶ್ ಇವರ ಸೇವಾ ವಹಿಯನ್ನು ಪರಿಶೀಲಿಸಿ, ಇದರಿಂದ ವಿಶ್ವವಿದ್ಯಾಲಯದ ಆರ್ಥಿಕ ಹೊರೆಯಾಗದಿರುವುದನ್ನು ಗಮನಿಸುತ್ತಾ ಉಲ್ಲೇಖದ ಸರ್ಕಾರಿ ಆದೇಶದಂತೆ ವೇತನ

ಶ್ರೇಣಿಯ ನಿಗದಿಯಲ್ಲಾದ ವ್ಯತ್ಯಾಸಗಳನ್ನು ಸರಿಪಡಿಸಲು ನಿರ್ಣಯಿಸಬೇಕಾಗಿದೆ. ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಡಾ. ಎಚ್.ಕೆ. ಸುರೇಶ, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಕಾಲೇಜು, ಉಡುಪಿ–ಇವರ ವೇತನಶ್ರೇಣಿಯಲ್ಲಾದ ವ್ಯತ್ಯಾಸವನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರವಾಗಿ ಪ್ರಾಚಾರ್ಯ ವೇತನಶ್ರೇಣಿ ನಿಗದೀಕರಣಕ್ಕೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 9: ಸಿ.ಎಲ್.ವೈ. ಸಂಸ್ಕೃತ ಕಾಲೇಜಿನ ಕಿರಿಯ ಪಂಡಿತರಾದ ಮಯೂರೇಶ ಶಾಸ್ತ್ರಿ ಇನಾಮದಾರ –ಇವರನ್ನು ಕೋರಿಕೆ ವರ್ಗಾವಣೆ ಮಾಡುವ ಬಗೆಗೆ ಮತ್ತು ಖಾಲಿಯಾದ ಕಿರಿಯ ಪಂಡಿತ ಹುದ್ದೆಯನ್ನು ತುಂಬಿಕೊಳ್ಳುವ ಬಗೆಗೆ.**

ಟಿಪ್ಪಣಿ: ವಿದ್ವಾನ್ ಮಯೂರೇಶ ಶಾಸ್ತ್ರಿ ಎನ್. ಇನಾಮದಾರ್ –ಇವರು ಸಿ.ಎಲ್.ವೈ. ಸಂಸ್ಕೃತ ಕಾಲೇಜಿನ ಕಿರಿಯ ಪಂಡಿತರಾಗಿದ್ದು, ಇವರನ್ನು ಭಾರತೀಯ ಸಂಸ್ಕೃತಿ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ, ವಿಜಯನಗರ, ಬೆಂಗಳೂರು –ಇಲ್ಲಿ ನಿವೃತ್ತಿಯಿಂದ ಖಾಲಿಯಾದ ಹುದ್ದೆಗೆ ಕೋರಿಕೆ ವರ್ಗಾವಣೆ ಮಾಡಲು ಉಭಯ ಕಾಲೇಜಿನವರೂ ಒಪ್ಪಿರುವ ಕಾರಣ ವರ್ಗಾವಣೆ ಪ್ರಕ್ರಿಯೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಸಿ.ಎಲ್.ವೈ. ಕಾಲೇಜು, ಧಾರವಾಡ –ಈ ಕಾಲೇಜಿನಲ್ಲಿ ತೆರವಾದ ಹುದ್ದೆಗೆ ನಿಯಮಾನುಸಾರ ನೂತನ ಕಿರಿಯ ಪಂಡಿತರನ್ನು ನಿಯುಕ್ತಿಗೊಳಿಸಲು ಅನುಮತಿಗಾಗಿ ಮಂಡಿಸಿದೆ.

ನಿರ್ಣಯ: **ಸಿ.ಎಲ್.ವೈ. ಸಂಸ್ಕೃತ ಕಾಲೇಜಿನ ಕಿರಿಯ ಪಂಡಿತರಾದ ಶ್ರೀ ಮಯೂರೇಶ ಶಾಸ್ತ್ರಿ ಇನಾಮದಾರ –ಇವರ ಕೋರಿಕೆ ವರ್ಗಾವಣೆ ಸಂಬಂಧವಾದ ವಿವರಗಳನ್ನು ಸಭೆಯು ಪರಿಶೀಲಿಸಿ ವರ್ಗಾವಣೆಗೆ ಒಪ್ಪಿಗೆಯನ್ನು ನೀಡಿತು. ಹೀಗೆ ವರ್ಗಾವಣೆಯಿಂದ ಖಾಲಿಯಾದ ಕಿರಿಯ ಪಂಡಿತ ಹುದ್ದೆಗೆ ನಿಯಮಾನುಸಾರ ತುಂಬಿಕೊಳ್ಳಲು ಸಭೆಯು ಅನುಮೋದಿಸಿತು.**

**ವಿಷಯ 10: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಪುರಸ್ಕಾರ ನಿಮಿತ್ತ ದತ್ತಿನಿಧಿ/ಸ್ವರ್ಣಪದಕ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದ ಸಂಸ್ಕೃತ ಕಾಲೇಜುಗಳಲ್ಲಿ ಎಂ.ಎ. ವಿದ್ವದುತ್ತಮಾ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡಿ ಸರ್ವಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳಿಗೆ ದತ್ತಿನಿಧಿ ಮತ್ತು ಸ್ವರ್ಣಪದಕ ಪುರಸ್ಕಾರವನ್ನು ನೀಡುವ ಕುರಿತು ರಾಜ್ಯದ ಗೌರವಾನ್ವಿತ ವ್ಯಕ್ತಿಗಳು ಹಾಗೂ ಸಂಸ್ಥೆಗಳು ವಿಶ್ವವಿದ್ಯಾಲಯದ ಸಂಪರ್ಕದಲ್ಲಿದ್ದಾರೆ. ಮಾನ್ಯ ಕುಲಪತಿಗಳು ಸಂಬಂಧಿಸಿದವರ ಜತೆ ಚರ್ಚಿಸುತ್ತಿದ್ದಾರೆ. ಈಗಾಗಲೇ ಈ ಕೆಳಕಂಡ ದತ್ತಿನಿಧಿ ಪುರಸ್ಕಾರ ಹಾಗೂ ಸ್ವರ್ಣಪದಕವನ್ನು ನೀಡಲು ಒಪ್ಪಿಗೆಯನ್ನು ಸೂಚಿಸಿರುತ್ತಾರೆ ಮತ್ತು ದತ್ತಿನಿಧಿ ಸ್ಥಾಪನೆಯ ಕುರಿತು ಪತ್ರವ್ಯವಹಾರವನ್ನು ಮಾಡಲಾಗಿದೆ. ಸಭೆಯ ಅನುಮೋದನೆಗೆ ಈ ಪಟ್ಟಿಯನ್ನು ಇರಿಸಿದೆ.

- ಮುಂಡರಗಿಯ ಶ್ರೀ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ತಮ್ಮ ಸಂಸ್ಥಾನಮಠದಿಂದ **‘ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸ್ವರ್ಣಪದಕ’**ವನ್ನು ‘ಶಕ್ತಿವಿಶಿಷ್ಟಾದ್ವೈತವೇದಾಂತ’ದ ಅಂತಿಮ ವರ್ಷದ ವಿದ್ಯಾರ್ಥಿಗೆ ಸ್ವರ್ಣಪದಕವನ್ನು ನೀಡಲು ರೂ. 25,000/–ಗಳನ್ನು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಿದ್ದು, ಸ್ಥಿರನಿಧಿ ಠೇವಣಿಯನ್ನು ಬ್ಯಾಂಕಿನಲ್ಲಿ ಇರಿಸಲಾಗಿದೆ.
- ಮೈಸೂರಿನ ಶ್ರೀ ನಂದಿಕೇಶ್ವರ ಆಫ್‌ಸೆಟ್ ಪ್ರಿಂಟರ್ಸ್‌ನ ಶ್ರೀ ಎಸ್. ಜ್ಞಾನಶಂಕರ್ ಅವರು ತಮ್ಮ ಪಿತಾಮಹರಾದ **“ಆಸ್ಥಾನ ಮಹಾವಿದ್ವಾನ್ ‘ಪಂಡಿತರತ್ನಂ’ ಶಿರಸಿ ಗುರುಶಾಂತ ಶಾಸ್ತ್ರಿಗಳ ಸ್ಮರಣಾರ್ಥ ಸ್ವರ್ಣಪದಕ”**ವನ್ನು ‘ಶಕ್ತಿವಿಶಿಷ್ಟಾದ್ವೈತವೇದಾಂತ’ದ ಅಂತಿಮ ವರ್ಷದ ವಿದ್ಯಾರ್ಥಿಗೆ ನೀಡಲು ಪತ್ರಿಸಿರುತ್ತಾರೆ.
- ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು **‘ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದತ್ತಿನಿಧಿ’** ಎಂಬ ಹೆಸರಿನಲ್ಲಿ ತಲಾ **ಒಂದು ಲಕ್ಷ ರೂ.ಗಳ ಎರಡು ದತ್ತಿನಿಧಿ**ಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ನಿರ್ಧರಿಸಿ ಪತ್ರಿಸಿರುತ್ತಾರೆ.
- ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಆಶ್ರಮ, ಅವಧೂತ ದತ್ತಪೀಠ, ಮೈಸೂರು ಇವರು ವಿಶ್ವವಿದ್ಯಾಲಯವು ನಡೆಸುವ **‘ವ್ಯಾಕರಣಶಾಸ್ತ್ರ’**ದ ಅಂತಿಮ ವರ್ಷದ ಸರ್ವಪ್ರಥಮ ವಿದ್ಯಾರ್ಥಿಗೆ ಪುರಸ್ಕಾರವನ್ನು ನೀಡಲು **ಒಂದು ಲಕ್ಷ ರೂ.**ಗಳ ದತ್ತಿನಿಧಿಯನ್ನು ನೀಡುವುದಾಗಿ ತಿಳಿಸಿರುತ್ತಾರೆ. ಈ ಕುರಿತು ಮಾನ್ಯ ಕುಲಪತಿಗಳನ್ನು ಮೇ 31ರ ಗುರುವಾರದಂದು ಆಶ್ರಮಕ್ಕೆ ಆಹ್ವಾನಿಸಿರುತ್ತಾರೆ.
- ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು, ಪೇಜಾವರ ಅಧೋಕ್ಷಜ ಮಠ, ಉಡುಪಿ–ಇವರನ್ನು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ನೀಡಬಹುದಾದ ಪುರಸ್ಕಾರಗಳನ್ನು ಪ್ರಾಯೋಜಿಸುವ ಸಲುವಾಗಿ ದತ್ತಿನಿಧಿಯನ್ನು ನೀಡುವಂತೆ ಕೋರಲಾಗಿದೆ.

ನಿರ್ಣಯ: **ಸಭೆಯು ವಿವರಗಳನ್ನು ಪರಿಶೀಲಿಸಿ ಮಾನ್ಯ ಕುಲಪತಿಗಳ ಕ್ರಮಕ್ಕೆ ತನ್ನ ಹರ್ಷವನ್ನು ವ್ಯಕ್ತಪಡಿಸಿತು. 2012–13ನೇ ಸಾಲಿನಲ್ಲಿ ಇನ್ನಷ್ಟು ದತ್ತಿನಿಧಿಗಳನ್ನು ಸ್ಥಾಪಿಸುವುದು ಉಚಿತವೆಂದು ಸಭೆಯು ಅಭಿಪ್ರಾಯಪಟ್ಟಿತು.**

**ವಿಷಯ 11: C-DAC ಸಂಸ್ಥೆಯಿಂದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವ ಬಗೆಗೆ.**

ಟಿಪ್ಪಣಿ: ಕೇಂದ್ರ ಸರ್ಕಾರದ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಂಸ್ಥೆಯಾದ C-DAC, ಬೆಂಗಳೂರು ಇವರು ‘ಭಾರತೀಯ ಪರಂಪರೆ, ಭಾಷೆ ಮತ್ತು ಸಂಗಣಕ ತಂತ್ರಜ್ಞಾನ ವಿಭಾಗ’ದ ವತಿಯಿಂದ ಸಂಸ್ಕೃತ ಮತ್ತು ಕನ್ನಡದಲ್ಲಿ ಕೈಗೊಳ್ಳಬಹುದಾದ ಉನ್ನತಾಧ್ಯಯನ ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಸಂಸ್ಕೃತ ಕಾಲೇಜುಗಳ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಲ್ಲಿ ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಜನರನ್ನು ಆಹ್ವಾನಿಸಿ ತರಬೇತಿಯನ್ನು

ನೀಡಬಯಸಿರುತ್ತಾರೆ. ಈ ಕಾರ್ಯಕ್ರಮದ ನಿರ್ವಹಣೆಗಾಗಿ C-DAC ಸಂಸ್ಥೆಯವರಿಗೆ ಒಬ್ಬ ಅಭ್ಯರ್ಥಿಗೆ ಐದು ಸಾವಿರ ರೂ.ಗಳ ಶುಲ್ಕ ಹಾಗೂ ಇತರೆ ವೆಚ್ಚಗಳು ಸೇರಿದಂತೆ ಒಂದೂವರೆ ಲಕ್ಷ ರೂ.ಗಳ ಅನುದಾನವನ್ನು ವಿಶ್ವವಿದ್ಯಾಲಯವು ಭರಿಸಬೇಕಾಗಿರುತ್ತದೆ. ಇದಕ್ಕೆ ಬೇಕಾದ ಪಠ್ಯಕ್ರಮ ಇತ್ಯಾದಿಗಳನ್ನು C-DAC ಸಂಸ್ಥೆಯವರು ಪೂರೈಸಲಿದ್ದು, ಈ ತರಬೇತಿಯನ್ನು ಅಧ್ಯಾಪಕರಿಗೆ ಕೊಡಿಸುವ ನಿಟ್ಟಿನಲ್ಲಿ ಸಭೆಯ ಅವಗಾಹನೆಗೆ ವಿಷಯವನ್ನು ಮಂಡಿಸಿದೆ.

ನಿರ್ಣಯ: **ಸಭೆಯು ವಿವರವಾಗಿ C-DAC ತರಬೇತಿ ಕಾರ್ಯಕ್ರಮದ ಬಗೆಗೆ ಚರ್ಚಿಸಿತು. ಎಲ್ಲ ರೀತಿಯಿಂದಲೂ ಅನುಕೂಲವಾಗಿರುವ ಕಾಲೇಜೊಂದರಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಬಹುದೆಂದೂ ತರಬೇತಿಗೆ ತಗಲುವ ವೆಚ್ಚಕ್ಕೆ ಅನುಮೋದನೆಯನ್ನೂ ಸಭೆಯು ನೀಡಿತು.**

**ವಿಷಯ 12: ವಾರ್ಷಿಕ ವರದಿ 2008–09 ಮತ್ತು 2009–10ರ ಪರಿಶೀಲನೆ ಮತ್ತು ಅನುಮೋದನೆ ಬಗೆಗೆ.**

ಟಿಪ್ಪಣಿ: 2008–09 ಮತ್ತು 2009–10ರ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿಯನ್ನು ಸಿದ್ಧಪಡಿಸಲಾಗಿದ್ದು, ಸಭೆಯ ಅವಗಾಹನೆಗಾಗಿ ಇರಿಸಿದೆ.

ನಿರ್ಣಯ: **2008–09 ಮತ್ತು 2009–10ರ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿತು. ಇದನ್ನು ಯುಕ್ತಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಬಹುದೆಂದು ಸಭೆಯು ಒಪ್ಪಿಗೆ ನೀಡಿ ಅನುಮೋದಿಸಿತು.**

**ವಿಷಯ 13: 2011ರ ಶೈಕ್ಷಣಿಕ ಸಾಲಿನ ಬಿ.ಎ. (ಅಂತಿಮ), ಎಂ.ಎ. (ಅಂತಿಮ) ವಿದ್ಯಾರ್ಥಿಗಳಿಗೆ ಘಟಿಕೋತ್ಸವ, ಪ್ರಮಾಣಪತ್ರ, ಗೌರವ ಡಾಕ್ಟರೇಟ್ ಪ್ರದಾನ, ಘಟಿಕೋತ್ಸವ ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮ –ಒಟ್ಟು ವೆಚ್ಚದ ಅನುಮೋದನೆ ಬಗೆಗೆ.**

ಟಿಪ್ಪಣಿ: **ಅ.** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನಲ್ಲಿ ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳನ್ನು ನಡೆಸಿತು. ಬಿ.ಎ. ವಿದ್ವನ್ಮಧ್ಯಮಾ ಅಂತಿಮ ಮತ್ತು ಎಂ.ಎ. ವಿದ್ವದುತ್ತಮಾ ಅಂತಿಮ ವರ್ಷದಲ್ಲಿ ವಿವಿಧ ಶಾಸ್ತ್ರವಾರು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರ ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಬಿ.ಎ. ವಿದ್ವನ್ಮಧ್ಯಮಾ ಅಂತಿಮ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: **154**

ಎಂ.ಎ. ವಿದ್ವದುತ್ತಮಾ ಅಂತಿಮ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: **135**

| **2011ನೇ ಸಾಲಿನ ಶಾಸ್ತ್ರ ಮತ್ತು ವೇದ ವಿದ್ವದುತ್ತಮಾ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ವಿವರ** | | | | | |
|---|---|---|---|---|---|
| **ಕ್ರ.ಸಂ.** | **ಶಾಸ್ತ್ರ** | **ನೋಂದಣಿ ಸಂಖ್ಯೆ** | **ಪಡೆದ ಅಂಕಗಳು** | **ಶೇಕಡ** | **ವಿದ್ಯಾರ್ಥಿಯ ವಿಳಾಸ** |
| 01. | ಅಲಂಕಾರ | F 2011070118 | 435 | 72% ವಿಶಿಷ್ಟ | ಭೀಮಸೇನ S/o. ಮಾಣಿಕ್ಯರಾವ್, ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–28. |
| 02. | ವ್ಯಾಕರಣ | F 2011070148 | 403 | 67% ಪ್ರಥಮ | ನಾಗೇಂದ್ರ S/o. ಕೇಶವ ಕೆ.ಎಸ್., ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು–24. |
| 03. | ನವೀನನ್ಯಾಯ | F 2011070123 | 454 | 75% ವಿಶಿಷ್ಟ | ಅರ್ಜುನ ಎಸ್.ಆರ್. S/o. ರಾಘವೇಂದ್ರ ಎಸ್., ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–28. |
| 04. | ಧರ್ಮಶಾಸ್ತ್ರ | F 2011070156 | 361 | 60% ಪ್ರಥಮ | ನಾಗರಾಜ ಭಟ್ S/o. ಗಣಪತಿ ಭಟ್, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು–24. |
| 05. | ಜ್ಯೋತಿಷ್ಯ | F 2011070219 | 486 | 81% ವಿಶಿಷ್ಟ | ಸುಧೀಂದ್ರ S/o. ಮಂಜುನಾಥ ಐತಾಳ, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ |
| 06. | ಪೂರ್ವಮೀಮಾಂಸಾ | F 2011070152 | 449 | 74% ವಿಶಿಷ್ಟ | ಸಂತೋಷ್‌ಕುಮಾರ್ ಜೋಷಿ S/o. ನಾರಾಯಣ ಜೋಷಿ, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು–24. |
| 07. | ದ್ವೈತವೇದಾಂತ | F 2011070128 | 477 | 79% ವಿಶಿಷ್ಟ | ಹಯವದನ ಬಿ.ಎಸ್. S/o. ಶ್ರೀಧರಮೂರ್ತಿ ಬಿ.ಎಸ್. ಪೂರ್ಣಪ್ರಜ್ಞ, ವಿದ್ಯಾಪೀಠ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು |
| 08. | ಅದ್ವೈತವೇದಾಂತ | F 2011070208 | 438 | 73% ವಿಶಿಷ್ಟ | ಅರುಣ್‌ಕುಮಾರ್ ಎ.ಎಲ್. S/o. ಲಕ್ಕೇಗೌಡ, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾ., ಮಂಡ್ಯ ಜಿಲ್ಲೆ |

| | | | | | |
|---|---|---|---|---|---|
| 09. | ವಿಶಿಷ್ಟಾದ್ವೈತವೇದಾಂತ | F 2011070157 | 283 | 47% ಉತ್ತೀರ್ಣ | ಹರ್ಷ ಎಚ್.ಎ. S/o. ಅನಂತರಾಂ ಭಟ್ಟಾರ್, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು–24. |
| 10. | ಶಕ್ತಿವಿಶಿಷ್ಟಾದ್ವೈತವೇದಾಂತ | F 2011070144 | 340 | 56% ದ್ವಿತೀಯ | ಮೃತ್ಯುಂಜಯ S/o. ಪ್ರಸನ್ನಯ್ಯ, ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ |
| 11. | ಜೈನ ಸಿದ್ಧಾಂತ | F 2011070107 | 409 | 68% ಪ್ರಥಮ | ಶ್ರೀಕಂಠ S/o. ನಂಜುಂಡಯ್ಯ ಆರ್., ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು–18 |
| 12. | ಋಗ್ವೇದ ಘನಾಂತ | F 2011070239 | 571 (ವಾ. 491; ಲೇ.80) | 98% ವಿಶಿಷ್ಟ | ರಮೇಶ ಭಟ್ಟ ಕೆ. S/o. ರಾಮಕೃಷ್ಣ ಭಟ್ಟ ಕೆ., ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ, ಉ.ಕ. |
| 13. | ಕೃಷ್ಣ ಯಜುರ್ವೇದ ಘನಾಂತ | F 2011070214 | 566 (ವಾ.500; ಲೇ. 66) | 100% ವಿಶಿಷ್ಟ | ರಾಜಶೇಖರ ವಿ.ಎಂ. S/o. ಮೇಳಯ್ಯ, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾ., ಮಂಡ್ಯ ಜಿಲ್ಲೆ |
| 14. | ಶುಕ್ಲ ಯಜುರ್ವೇದ | F 2011070114 | 515 (ವಾ. 459; ಲೇ. 56) | 91% ಉತ್ತೀರ್ಣ | ಕಿರಣ್ ಡಿ.ಎಸ್. S/o. ಸೋಮಸುಂದರ್ ಡಿ.ಜಿ., ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು–18 |
| 15. | ಸಾಮವೇದ ಸಲಕ್ಷಣ ಘನಾಂತ | F 2011070117 | 558 (ವಾ. 492; ಲೇ. 66) | 98% ವಿಶಿಷ್ಟ | ಕೃಷ್ಣಮಾಚಾರ್ಯ ವಿ.ಎಸ್. S/o. ಸಂಪತ್ಕುಮಾರಾಚಾರ್ ವಿ.ಕೆ., ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು–18 |

ಆ. ಗೌರವ ಡಾಕ್ಟರೇಟ್ ಪ್ರದಾನ ಮಾಡಬೇಕಾಗಿದ್ದು, ಈ ಕೆಳಕಂಡವರಿಗೆ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಪ್ರಥಮ ಗೌರವ ಡಾಕ್ಟರೇಟ್ ನೀಡಬಹುದಾಗಿದೆ.

1. **ಪ್ರೊ. ಎನ್. ರಂಗನಾಥಶರ್ಮಾ** – ವ್ಯಾಕರಣಶಾಸ್ತ್ರ, ಕನ್ನಡ–ಸಂಸ್ಕೃತ ಉಭಯಭಾಷಾ ಸೇವೆ
2. **ಡಾ. ಸುಧಾಕರ ಚತುರ್ವೇದಿ** – ವೇದವ್ಯಾಖ್ಯಾನಕಾರರು
3. **ಡಾ. ಕೆ.ಟಿ. ಪಾಂಡುರಂಗಿ** – ಮೀಮಾಂಸಾ ಶಾಸ್ತ್ರಾಧ್ಯಯನ
4. **ಪ್ರೊ. ಸಿ.ಜಿ. ಪುರುಷೋತ್ತಮ್** – ಸಂಸ್ಕೃತಾನುವಾದ ಕ್ಷೇತ್ರ
5. **ಪ್ರೊ. ಮಲ್ಲಿಕಾರ್ಜುನ ಪರಡ್ಡಿ** – ಮಹಾಕಾವ್ಯ ರಚಕರು

ಇ. ದೀಕ್ಷಾಂತ ಘಟಿಕೋತ್ಸವ ಭಾಷಣಕ್ಕಾಗಿ ಪದ್ಮಶ್ರೀ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರನ್ನು ಆಹ್ವಾನಿಸಬಹುದಾಗಿದೆ.

ಈ. ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಒಬ್ಬ ಸಂಗೀತ ವಿದ್ವಾಂಸರನ್ನು ಆಹ್ವಾನಿಸಬಹುದು. ಒಟ್ಟು ಕಾರ್ಯಕ್ರಮದ ವೆಚ್ಚ ಅಂದಾಜು 5.00 ಲಕ್ಷಕ್ಕೆ ಅನುಮೋದನೆಯನ್ನು ಕೋರಿದೆ.

ನಿರ್ಣಯ: **ಸಭೆಯು ಮಾನ್ಯ ಕುಲಪತಿಗಳು ಮಂಡಿಸಿದ ಎಲ್ಲ ವಿವರಗಳನ್ನು ಪರಿಶೀಲಿಸಿ, ಹರ್ಷದಿಂದ ತನ್ನ ಅನುಮೋದನೆಯನ್ನು ನೀಡಿತು. ಈ ಸಂಬಂಧವಾಗಿ ಮಾನ್ಯ ಕುಲಪತಿಗಳು ಪ್ರಮಾಣಪತ್ರದ ಅಧಿಸೂಚನೆ, ದೀಕ್ಷಾಂತ ಘಟಿಕೋತ್ಸವದ ಸಮವಸ್ತ್ರ ಮತ್ತು ರೀತಿ–ನೀತಿಗಳು ಹಾಗೂ ಇತರೆ ಎಲ್ಲ ಕ್ರಮವನ್ನು ವಹಿಸಬಹುದೆಂದು ಸಭೆಯು ಅನುಮೋದಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು